ಸಂ.ಪ್ರ-2 2001-2002

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ಜನಪದ ವಿಚಾರ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ ೨ ಆಗಸ್ಟ್, ೨೦೦೧ ಸಂಚಿಕೆ ೧

ಜಾತಿಭೇದ ವಿಷಯದ ಜಾಗತೀಕರಣ ಸರಿಯೇ?

★

ಪ್ರಥಮ ಸತ್ಯಾಗ್ರಹಿ ಬಾಬಾ ಆಮ್ಟೆ

★

ವ್ಯರ್ಥವಾಗಿ ಸಮುದ್ರ ಸೇರುತ್ತಿರುವ ನೀರಿನ ಉಪಯೋಗ ಹೇಗೆ?

★

ಏಕಾಂಗಿ ಸಾಮಾಜಿಕ ವೀರ

★

ನ್ಯಾಯ ಮತ್ತು ಶಾಂತಿಗಾಗಿ ವಿಶ್ವಜನತೆಯ ಸಂಘಟನೆ ಅಗತ್ಯ

★

ಪಾದಯಾತ್ರೆ ಒಂದು ವಿನೂತನ ಶಕ್ತಿ

★ ಈ ಸಂಚಿಕೆಯಲ್ಲಿ ★

ಜನಪದ ವಿಚಾರ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ : ೨ ಸಂಚಿಕೆ : ೧

ಆಗಸ್ಟ್ ೨೦೦೧

ಸಂಪಾದಕ

ಸುರೇಂದ್ರ ಕೌಲಗಿ

ಸಲಹಾ ಸಮಿತಿ,
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

....

ಚಂದಾ ವಿವರ :

ವಾರ್ಷಿಕ : ರೂ. ೧೦೦/-
ಅರ್ಧವಾರ್ಷಿಕ : ರೂ. ೫೦/-
ಬಿಡಿ ಸಂಚಿಕೆ : ರೂ. ೧೦/-

ಸಂಪರ್ಕ ವಿಳಾಸ :
ಜನಪದ ಸೇವಾ ಟ್ರಸ್ಟ್ (ರಿ.)
ಕಲ್ಯಾಣಿ ಬೀದಿ,
ಮೇಲುಕೋಟೆ
ಜಿಲ್ಲಾ : ಮಂಡ್ಯ. ೫೭೧ ೪೩೧.
ದೂರವಾಣಿ:೦೮೨೩೬ ೪೮೭೫೪

ಈ ಸ್ವಾತಂತ್ರ್ಯವೆಂದರೆ ಏನಪ್ಪಾ,
ಅವನಿಗೆ ಅವಳಿಗೆ ನಿನಗೆ ಅಥವಾ ನನಗೆ
ಅಥವಾ ಎಲ್ಲರಿಗೆ ?
ಗೆಳೆಯರಾಗಿರೋದು
ಸಾಗುತ್ತಿರಲು ಮುಗಿಲೋಟ
ಹೊಳೆವ ನೀಲಿ ಆಗಸವನು
ವೀಕ್ಷಿಸೋದು
ಹಾಡಿನಲಿವ ಹಕ್ಕಿಗಳನು ಗಮನಿಸೋದು
ಅಲ್ಲಿ ಇಲ್ಲಿ ಹರಿಯುತ್ತಿರುವ ಜಂತುಗಳನು
ತಿಳಿಯೋದು
ಎಂದೂ ಪರಚದಿರೋದು
ಎಂದೆಂದೂ ಕಚ್ಚದಿರೋದು
ಜಗಳ ದೊಂಬಿ ಮಾಡುತ್ತಿರುವ
ಪುಟಾಣಿಗಳ ಒಲಿಸೋದು
ನೂಕದಿರೋದು, ನುಗ್ಗದಿರೋದು
ತಿಳಿನಗೆಯ ಚೆಲ್ಲೋದು,
ಮಂದಹಾಸ ಸೂಸೋದು
ನೆರವು ಕೈ ನೀಡೋದು
ಆದ್ದರಿಂದ ಪ್ರಿಯ ಗೆಳೆಯರೇ,
ಸ್ವಾತಂತ್ರ್ಯವೆಂದರೆ ಪ್ರೀತಿಸೋದು,
ಹಂಚೋದು
ನೆರವು ನೀಡಿ ಬಾಳೋದು
ಕಾಳಜಿ ತುಂಬಿ ಬದುಕೋದು
ಬೆವರದಿರೋದು ಎಲ್ಲೆಲ್ಲಿಯೂ
ಇರುವ ಜನರ ಪ್ರೀತಿಸೋದು

–ಸಫ್ದರ್ ಹಷ್ಮಿ

ವಿಚಾರ ದೀಪ್ತಿ.......

ಮುನ್ನೂರು ಅರವತ್ತು ದಿನ ಶ್ರಮಪಟ್ಟು ನಿಚ್ಚಣಿಕೆಯೇರಿ ಕೊನೆಗೊಂದು ದಿನ ಕೈಜಾರಿ ಬಿದ್ದಂತೆ ನನ್ನ ಭಕ್ತಿಯ ಸ್ಥಿತಿಯಿದೆ. ಮನಸ್ಸಿನಲ್ಲಿ ನಿಶ್ಚಿತ ಭಕ್ತಿಯ ಗುರಿಯಿಲ್ಲದಿರುವವಗೆ ಎಷ್ಟು ಕಾಲ ಲಿಂಗಾರ್ಚನೆ ಮಾಡಿದರೂ ವ್ಯರ್ಥ. ಹಾಲು ತುಂಬಿದ ಕೊಡ ಉರುಳಿಸಿ ತಿರುಗಿ ತುಂಬಿಸಲು ಸಾಧ್ಯವೇ, ಸಂಗಮನಾಥಾ ?

ಆಡಂಬರದ ಪುರಾಣ-ಕೀರ್ತನೆಗಳಿಗೆ ಮೆಚ್ಚಿಸಿಕೊಂಡು ನಾನು ಅಂತೆಯೇ ಬಡಬಡಿಸುತ್ತ ಕೆಟ್ಟೆ. ಅನುಸರಿಸಬೇಕಾದ ಅನುಭಾವದ ಅಭಾವದಲ್ಲಿದ್ದು ಬಿಟ್ಟೆ. ಅಮೃತ ತುಂಬಿದ ಕೊಡವನ್ನು ಒಡೆದು ಹರಿಯಗೊಟ್ಟು ತಿರುಗಿ ಹುಡುಕುವುದುಂಟೆ? ನನ್ನ ಭಕ್ತಿಯು ಒಡೆಯ-ಸೇವಕನ ಸಂಬಂಧದಂತಿದೆ. ಇದಕ್ಕೆ ಪ್ರತಿ ಆಡಿದರೆ ಮಹಾ ನರಕ ದೊರೆಯಲಿ ಸಂಗಮನಾಥಾ।

ಯುದ್ಧ ಭೂಮಿಯಿಂದ ಸೈನಿಕ ಓಡಿದರೆ ಅಪಕೀರ್ತಿ ಸೇನಾ ಪತಿಗೆ ಬರುವುದು. ಸಮರದಲ್ಲಿ ನಾನು ಹೋರಾಡಿ ಗೆದ್ದು ಪಾರಾಗು ವಂತೆ ನನ್ನ ತನು ಮನ ಧನ ವಿಷಯದಲ್ಲಿ ವಂಚನೆ ಸೇರದಂತೆ ಮಾಡಿ ಕಾಪಾಡು ಸಂಗಮನಾಥಾ।

ಹೊರನೋಟದ ನನ್ನ ಸಾತ್ವಿಕ ನಡೆನುಡಿಗೆ ಮನಸೋತ ಜನರು ಒಳಗಿನ ಹುಳುಕನರಿಯದ ಭಕ್ತನೆಂದು ಹೊಗಳುತ್ತಾರೆ. ಆದರೆ ನನ್ನ ಮಾನಾಪಮಾನವಾಗುವುದು ಶರಣರೆದುರಿನಲ್ಲಿ. ಜಾತಿ ಪರಜಾತಿ ವಿಷಯ ಬರುವುದೂ ಅವರೆದುರಿನಲ್ಲಿ. ತನು ಮನ ಧನ ಈ ಮೂರು ವಿಷಯದಲ್ಲೂ ವಂಚನೆಯುಳ್ಳ ಡಾಂಭಿಕ ನಾನು. ಇದು ತಲೆಯು ಒಡೆಯನಾಗಿರುವವನಲ್ಲಿ ಕಣ್ಣು ಬಚ್ಚಿಕೊಂಡಂತೆ ಸಂಗಮನಾಥಾ।

-ಬಸವೇಶ್ವರ

ಜಾತಿಭೇದ ವಿಷಯದ ಜಾಗತೀಕರಣ ಸರಿಯೆ?
– ಒಂದು ವಿವೇಚನೆ

–ಸುರೇಂದ್ರ ಕೌಲಗಿ

ಇದೇ ಆಗಸ್ಟ್ ೩೧ ರಿಂದ ಸೆಪ್ಟೆಂಬರ್ ೭ ನೇ ತಾರೀಖಿನ ಅವಧಿಯ ಒಳಗೆ ದಕ್ಷಿಣ ಆಫ್ರಿಕಾದ ಡರ್ಬಾನ್ ನಗರದಲ್ಲಿ ಭಾರತದಲ್ಲಿಯ ಜಾತಿ ವಿಷಯ ಪ್ರಸ್ತಾಪಗೊಳ್ಳಲಿದೆ! ಆಗ ಅದು ಜಾಗತಿಕ ಸಮಸ್ಯೆಯಾಗಿ ಪರಿವರ್ತನಗೊಳ್ಳಬಹುದು. ಡರ್ಬಾನಿನಲ್ಲಿ ವಿಶ್ವರಾಷ್ಟ್ರಸಂಸ್ಥೆಯ ಆಶ್ರಯದಲ್ಲಿ **"ಜನಾಂಗ ಮತ್ತು ಜನಾಂಗೀಯ ಭೇದ"** ಕುರಿತಾದ ಜಾಗತಿಕ ಮಟ್ಟದ ಒಂದು ಸಮ್ಮೇಳನ ನಡೆಯಲಿದೆ. ಆ ಸಮ್ಮೇಳನದಲ್ಲಿ ಭಾರತದಲ್ಲಿಯ ಜಾತಿ ಮತ್ತು ಜಾತಿ ಆಧಾರಿತ ಭೇದ ಕುರಿತು ಭಾರತದ ಕೆಲವು ಸರಕಾರೇತರ ಸಂಘಟನೆಗಳು ವಿಷಯವನ್ನು ಮಂಡಿಸುವ ಆಲೋಚನೆ ಹೊಂದಿವೆ ಮತ್ತು ಅದಕ್ಕಾಗಿ ಪ್ರಯತ್ನಿಸುತ್ತಿವೆ. ಆದರೆ ಭಾರತ ಸರ್ಕಾರ ಆ ಸಂಘಟನೆಗಳ ಈ ಆಲೋಚನೆಯನ್ನು ವಿರೋಧಿಸಿದೆ ಮತ್ತು ಅವುಗಳ ಪ್ರತಿನಿಧಿಗಳು ಡರ್ಬಾನಿಗೆ ತೆರಳದಂತೆ ತಡೆಯುವ ಸಾಧ್ಯತೆಯೂ ಇದೆ. ಇದೊಂದು ಸೂಕ್ಷ್ಮ ವಿಷಯವಾಗಿದೆ. ಈ ಕುರಿತು ಇರುವ ಪರ ಮತ್ತು ವಿರೋಧ ವಾದಗಳನ್ನು ತಿಳಿಯಲು ಪ್ರಯತ್ನಿಸೋಣ.

ಜಾತಿ ಭೇದದ ಆಚರಣೆಯ ವಿಚಾರವನ್ನು ಜಾತೀಕರಣಗೊಸಬೇಕೆಂದು ಬಯಸುತ್ತಿರುವವರ ವಾದ ಈ ರೀತಿ ಇದೆ:–

೧. ಜಾತಿ ಪದ್ಧತಿ ಜನಾಂಗೀಯ ಭೇದ ನೀತಿಗಿಂತಲೂ ಕೆಟ್ಟದಾಗಿದೆ;

೨. ಜಾತಿ ಪದ್ಧತಿ ಜನ್ಮದಿಂಲೇ ಹೇರಲ್ಪಟ್ಟಿದ್ದೂ, ಧರ್ಮದಿಂದ ಪುನೀತಗೊಳಿಸಲ್ಪಟ್ಟಿದ್ದೂ ಮತ್ತು ಪರಂಪರೆಯಿಂದ ವೈಭವೀಕರಿಸಲ್ಪಟ್ಟಿದ್ದೂ ಆಗಿದೆ;

೩. ಭಾರತದ ಸಂವಿಧಾನ, ಶಾಸಕಾಂಗ ಮತ್ತು ನ್ಯಾಯಾಂಗದ ಇತಿಹಾಸದ ಮೇರೆಗೆ ಜಾತಿ ಆಧಾರಿತ ಭೇದ ನೀತಿಯನ್ನು ಜನಾಂಗೀಯ ಭೇದನೀತಿಯೆಂದು ಗುರುತಿಸಲ್ಪಡಬೇಕಾಗಿದೆ. ಏಕೆಂದರೆ ಜಾತಿ ಭೇದ ನೀತಿಯು ವಿಶ್ವದ ಬೇರೆ ದೇಶಗಳಲ್ಲಿ ಇರುವ ಜನಾಂಗೀಯ ಭೇದ ನೀತಿಗಿಂತಲೂ ಮಹಾ ಮತ್ಸರವುಳ್ಳದ್ದಾಗಿದೆ.

೪. ಇದುವರೆಗೆ ನಡೆದ ವಿಶ್ವ ರಾಷ್ಟ್ರ ಸಂಸ್ಥೆಯ ಯಾವುದೇ ಜಾಗತಿಕ ಸಮಾವೇಶವು ಭಾರತದಲ್ಲಿಯ ಜಾತಿ ಆಧಾರಿತ ಭೇದ ನೀತಿಯನ್ನು ಗಮನಕ್ಕೇ ತೆಗೆದುಕೊಂಡಿಲ್ಲ. ಇದರಿಂದಾಗಿ ವಿಶ್ವರಾಷ್ಟ್ರ ಸಂಸ್ಥೆಯು ಈ ಭೇದ ನೀತಿಯ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದೇ ಉಳಿದಿದೆ ಮತ್ತು ಅದರ

ಸಾಮರ್ಥ್ಯದ ಬಗ್ಗೆ ನಕಾರಾತ್ಮಕ ಸಂಕೇತಗಳು ಗೋಚರಿಸುತ್ತಿವೆ.

೫. ಆಗಸ್ಟ್ ೨೦೦೦ ರಂದು ಜಿನಿವಾದಲ್ಲಿ ನಡೆದ ವಿಶ್ವರಾಷ್ಟ್ರ ಸಂಸ್ಥೆಯ ೫೨ನೆ ಉಪ-ಸಮಿತಿಯ ಸಭೆಯಲ್ಲಿ "ಜಾತಿ ಆಧಾರಿತ ಭೇದ ನೀತಿ" ಕುರಿತು ಒಂದು ಅಧ್ಯಯನ ನಡೆಯಬೇಕೆಂದು ಸರ್ವಾನುಮತದಿಂದ ತೀರ್ಮಾನವಾಗಿದೆ.

೬. ಜಾತಿ ಆಧಾರಿತ ಭೇದವು ಅವಿನಾಶಿಯಾಗಿದೆ;

೭. ಚರ್ಚ್‌ಗಳ ಮೂಲಕ ಇದು ವರೆಗೆ ಆಗಿರುವ ಮತಾಂತರಗಳಿಂದ ದಲಿತ ಮತ್ತು ಸವರ್ಣೀಯರ ನಡುವಿನ ತಾರತಮ್ಯ ಎಷ್ಟು ಕಡಿಮೆ ಆಗ ಬೇಕಿತ್ತೋ ಅಷ್ಟು ಕಡಿಮೆ ಆಗಿಲ್ಲ; ಈಶಾನ್ಯ ಭಾರತದ ರಾಜ್ಯಗಳಲ್ಲಿ ನಡೆದ ಮತಾಂತರವನ್ನು ವಿರೋಧಿಸುವ ಸವರ್ಣೀಯರು ಮತ್ತು ಮೂಲ ಭೂತವಾದಿಗಳು ಅಲ್ಲಿ ಚರ್ಚ್‌ಗಳು ಮಾಡಿರುವ ಉತ್ತಮ ಕೆಲಸವನ್ನು ಗಣನೆಗೆ ತೆಗೆದುಕೊಳ್ಳುತ್ತಿಲ್ಲ; ಹಾಗೆ ನೋಡಿದರೆ ಅಲ್ಲಿ ಚರ್ಚ್ ಮಾಡಿರು ವಷ್ಟು ಸೇವಾ ಕಾರ್ಯವನ್ನು ಸವರ್ಣೀಯರು ಮಾಡಿಲ್ಲ. ರಾಷ್ಟ್ರೀಯ ಸ್ಯಾಂಪಲ್ ಸರ್ವೆ ಪ್ರಕಾರ ನಾಗಾಲ್ಯಾಂಡ್ ಮತ್ತು ಅರುಣಾಚಲ ಪ್ರದೇಶ ಗಳಲ್ಲಿಯ ಸಾಕ್ಷರತೆ ಉತ್ತರಪ್ರದೇಶ ಮತ್ತು ರಾಜಸ್ಥಾನಗಳಲ್ಲಿಗಿಂತ ಹೆಚ್ಚಾಗಿದೆ.

೮. ೧೯೯೬-೯೭ ಮತ್ತು ೧೯೯೭-೯೮ ರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗ ಸಲ್ಲಿಸಿರುವ ವರದಿಗಳಲ್ಲಿ ಕಾಣಿಸಲಾಗಿ ರುವ ಜಾತಿ ಆಧಾರಿತ ಭೇದ ನೀತಿಯು ಇನ್ನೂ ಭಾರತೀಯ ಸಮಾಜ ದಲ್ಲಿ ಜಾರಿಯಲ್ಲಿದೆ;

೯. ಕಳೆದ ಜನವರಿ ೨೬ ರಂದು ಗುಜರಾತ್‌ನಲ್ಲಿ ಸಂಭವಿಸಿದ ಭೂಕಂಪನದ ನಂತರ ನಡೆದ ಪುನರ್ ನಿರ್ಮಾಣದ ಕಾರ್ಯದಲ್ಲಿಯೂ ಅಸ್ಪೃಶ್ಯತೆಯನ್ನು ಆಚರಿಸಲಾಗಿದೆ;

೧೦. ಒಟ್ಟಾರೆ ದೇಶಕ್ಕೆ ಸ್ವಾತಂತ್ರ್ಯ ಬಂದು ಐದು ದಶಕಗಳು ಕಳೆದು ಹೋದರೂ ಜಾತಿ ಭೇದ ನೀತಿ ಅಳಿದಿಲ್ಲ;

೧೧. ಡರ್ಬಾನಿನ ಸಮಾವೇಶದಲ್ಲಿ ಈ ವಿಷಯ ಚರ್ಚೆಗೆ ಬಂದರೆ ಸಮಾನತಾ ನೀತಿಯನ್ನು ಪ್ರತಿಪಾದಿಸುವ ಭಾರತದ ಗೌರವ ಹೆಚ್ಚಾಗುತ್ತದೆ.

ಮೇಲ್ಕಾಣಿಸಿದ ಅಂಶಗಳು ಜಾತಿ ಭೇದ ವಿಷಯವನ್ನು ವಿಶ್ವರಾಷ್ಟ್ರ ಸಂಸ್ಥೆಯ ಡರ್ಬಾನಿನ ಸಮಾವೇಶದಲ್ಲಿ ಎತ್ತಲು ಪೂರಕವಾಗಿರುವಂಥವು ಎಂಬು ದಾಗಿ ಕೆಲವು ಸರ್ಕಾರೇತರ ಸಂಘಟನೆಗಳು ಹೇಳುತ್ತಿವೆ.

ಇನ್ನು ಭಾರತ ಸರ್ಕಾರ ಈ ಬಗ್ಗೆ ಏನು ನಿಲುವು ತಾಳಿದೆ ಎಂಬುದನ್ನು ನೋಡೋಣ. ಭಾರತ ತನ್ನ ನಿಲುವನ್ನು ಡರ್ಬಾನ್ ಸಮಾವೇಶದಲ್ಲಿ ಮಂಡಿಸಲು ಸುಪ್ರಸಿದ್ಧ ಕಾನೂನು ತಜ್ಞ ಅಟೋರ್ನಿ - ಜನರಲ್ ಸೋಲಿ ಸೋರಾಬ್ಜಿಯವರನ್ನು ಕಳುಹಿಸುತ್ತಿದೆ.

೧. ಜಾತಿ ಪದ್ಧತಿಯು ಜನಾಂಗೀಯ ಭೇದ ನೀತಿಯ ಕಕ್ಷೆಯೊಳಗೆ ಬರುವುದಿಲ್ಲ;

೨. ಭಾರತದ ಸಂವಿಧಾನ ಯಾವುದೇ ಜಾತಿ, ಜನಾಂಗ ಅಥವಾ ಪಂಗಡ ಆಧಾರಿತ ಭೇದ ನೀತಿಯ ಆಚರಣೆಯನ್ನು ಪೂರ್ಣವಾಗಿ ನಿರಾಕರಿಸಿದೆ ಮತ್ತು ಆ ಕುರಿತು ಅನೇಕ ಕಾನೂನುಗಳನ್ನು ಸ್ವತಃ ಕೇಂದ್ರ ಸರ್ಕಾರ ಮತ್ತು ದೇಶದ ಎಲ್ಲ ರಾಜ್ಯ ಸರ್ಕಾರಗಳು ರಚಿಸಿ ಅನುಷ್ಠಾನಕ್ಕೆ ತಂದಿವೆ;

೩. ಸಂವಿಧಾನದ ವಿಧಿಗಳಾದ ೧೫, ೧೬. ೧೭, ೨೩, ೨೯, ೩೩೧, ೩೩೨, ೩೩೮, ೩೪೧ ಇತ್ಯಾದಿಗಳು ಹಾಗೂ ೧೯೭೬ ರಲ್ಲಿ ಜಾರಿಗೆ ಬಂದ ನಾಗರಿಕ ಹಕ್ಕುಗಳ ರಕ್ಷಣಾ ಕಾನೂನು ಮತ್ತು ೧೯೮೯ ರ ಎಸ್‌ಸಿ/ ಎಸ್‌ಟಿಗಳ ಮೇಲಿನ ದೌರ್ಜನ್ಯಗಳ ತಡೆಯುವಿಕೆ ಕಾನೂನು - ಇವೆಲ್ಲವೂ ಭಾರತದಲ್ಲಿ ಜಾತಿ ಭೇದ ನೀತಿಗೆ ಪೂರ್ಣವಾದ ತಿಲಾಂಜಲಿಯನ್ನಿತ್ತಿವೆ.

೪. ಧರ್ಮ, ಜಾತಿ, ಭಾಷೆ, ಪ್ರದೇಶ, ವರ್ಣ, ಲಿಂಗ ಮುಂತಾದ ಎಲ್ಲ ಸ್ವಾಭಾವಿಕ ಹಾಗೂ ಕೃತಕ ಭೇದಗಳನ್ನು ಭಾರತದ ಸಂವಿಧಾನ ಖಡಾ ಖಂಡಿತವಾಗಿ ತಿರಸ್ಕರಿಸಿದೆ ಮತ್ತು ಭಾರತ ದೇಶವನ್ನು "ಧರ್ಮ ನಿರಪೇಕ್ಷ" (ಸೆಕ್ಯೂಲರ) ಎಂದು ಘೋಷಣೆ ಮಾಡಿದೆ. ಆದ್ದರಿಂದ ಈಗ ಆಗಬೇಕಾಗಿರುವುದು ಸಾಮಾಜಿಕ ಅಹಿಂಸಕ ಕ್ರಾಂತಿಯೇ ಹೊರತು ಚರ್ಚೆ, ಸಮಾವೇಶ, ಸಮ್ಮೇಳನಗಳಷ್ಟೇ ಅಲ್ಲ.

೫. ಜಾತಿ ಭೇದ ವಿಷಯಕ ಸಮಸ್ಯೆಗಳು ದೇಶದ ಆಂತರಿಕ ಸಮಸ್ಯೆಗಳು; ಆಂತರಿಕವಾಗಿರುವ ಎಲ್ಲ ಸಾಮಾಜಿಕ ಸಮಸ್ಯೆಗಳನ್ನು ಜಾಗತೀಕರಣಗೊಳಿಸುತ್ತ ಹೋದರೆ ಅದಕ್ಕೆ ಅಂತ್ಯವೆಂಬುದೇ ಇರುವುದಿಲ್ಲ ಮತ್ತು ಒಟ್ಟಾರೆ ಭಾರತೀಯ ಜನಪದದ ಪ್ರಾಚೀನತಮ ವಿಶಾಲದೃಷ್ಟಿ ಹಾಗೂ ಸಂಸ್ಕೃತಿಯ ಅವಹೇಳನವನ್ನು ಸ್ವತಃ ಜನಪದರೇ ಮಾಡಿಕೊಂಡಂತಾಗುತ್ತದೆ.

ಈಗ ನಾವು ತಟಸ್ಥ ಭಾವನೆಯಿಂದ ನಮ್ಮ ಅಭಿಪ್ರಾಯಕ್ಕೆ ಬರಲು ಪ್ರಯತ್ನಿಸೋಣ.

ಭಾರತದ ಸಂಸ್ಕೃತಿ ೨೦,೦೦೦ ವರ್ಷಗಳಷ್ಟು ಪ್ರಾಚೀನವಾದುದ ಮತ್ತು ಅದು ನಿರಂತರ ಬೆಳವಣಿಗೆಯನ್ನು, ಮಾರ್ಪಾಟನ್ನೂ ಹೊಂದುತ್ತಿರುವಂಥದು. ಅದು ಎಂದೂ ನಿಂತ ನೀರಿನಂತಾಗಿಲ್ಲ. ಅಲ್ಲದೆ, ಭಾರತದ ಪುರಾತನ ಸಂಸ್ಕೃತಿ ಎಂದು ಕರೆಯಲ್ಪಡುವ ವೇದ ಸಂಸ್ಕೃತಿಯಲ್ಲಿ ಮಾನವ ಕುಲದ ಉತ್ಕರ್ಷದ ವಿಚಾರಗಳು, ರೀತಿ-ನೀತಿಗಳು ಮತ್ತು ಜೀವನ ವಿಧಾನಗಳು ಇವೆಯೇ ಹೊರತು ಮಾನವ - ಮಾನವರಲ್ಲಿ ಭೇದ ಎಣಿಸುವ ಮಾತುಗಳೇ ಆಗಲಿ, ಸಂಕೇತಗಳೇ ಆಗಲಿ ಇಲ್ಲ. ಆ ಸಂಸ್ಕೃತಿ ಎಂಬುದು ಇಂದಿನ ಧರ್ಮ-ಜಾತಿ-ಜನಾಂಗ-ವರ್ಣ ಮುಂತಾದ ಸಾಮಾಜಿಕ ಭೇದಗಳಿಂದ ಮುಕ್ತವಾಗಿದ್ದಿತು. ಕಾಲಪ್ರವಾಹ ಹರಿಯುತ್ತ ಹೋದಂತೆ, ನದಿಗಳಲ್ಲಿ ಕಶ್ಮಲಗಳು ಸೇರುವಂತೆ, ಆ ವೇದ ಸಂಸ್ಕೃತಿಯಲ್ಲಿ ಜಾತೀಯತೆಯಂಥ ಕೀಳು ವ್ಯವಸ್ಥೆಗಳು ಉಂಟಾದವು. ಆದರೆ ಮೇಲೆ ತಿಳಿಸಿದಂತೆ ಭಾರತೀಯ ಸಂಸ್ಕೃತಿ ನಿತ್ಯ ಪರಿವರ್ತನ ಶೀಲವಾದುದು, ಮಾನವನ ಉತ್ಕರ್ಷದ ಬಗ್ಗೆಯೇ ಯೋಚಿಸುವಂಥದು. ಆದ್ದರಿಂದಲೇ ಭಾರತದಲ್ಲಿ ಸಾಮಾಜಿಕ ಸಮಾನತೆಯನ್ನು ಎತ್ತಿಹಿಡಿಯಲು ಮತ್ತು ಅದನ್ನು ಸಮಾಜದಲ್ಲಿ ಜೀವನ ವಿಧಾನವನ್ನಾಗಿಸಲು ಅನೇಕ ಸಾಧು-ಸಂತರು-ಮಹಾತ್ಮರು,-ದಾಸರು - ಸಾಹಿತಿಗಳು ಸಮಾಜ ಸೇವಕರು - ಶಿಕ್ಷಣತಜ್ಞರು - ನ್ಯಾಯಪಂಡಿತರು ಜನ್ಮತಾಳಿ ಇಂದಿಗೂ ಆ ವೇದ ಸಂಸ್ಕೃತಿಯ ಮಾನವೋತ್ಕರ್ಷದ ವಿಚಾರಗಳನ್ನು ಅನುಷ್ಠಾನಕ್ಕೆ ತರಲು ತಮ್ಮ-ತಮ್ಮ ಶಕ್ತ್ಯಾನುಸಾರ ಪ್ರಯತ್ನಿಸುತ್ತಿದ್ದಾರೆ. ಭಾರತದ ವೇದ - ಉಪನಿಷತ್ - ಆರಣ್ಯಕಗಳು ಆನಂತರ ಬಂದ ರಾಮಾಯಣ, ಮಹಾಭಾರತಗಳು, ಪುರಾಣಗಳು ಎಲ್ಲವೂ ಅಂತಿಮವಾಗಿ ಸಾಮಾಜಿಕ ನ್ಯಾಯ ಮತ್ತು ಸತ್ಯಸಂಧತೆಯ ಯಶೋಗಾಥೆಯನ್ನೇ ಹಾಡಿವೆ. ಇಂದು ನಾವು ೨೧ನೇ ಶತಮಾನದಲ್ಲಿದ್ದೇವೆ. ಈ ಶತಮಾನದಲ್ಲಿ ನಾವು ಭಾರತದಲ್ಲಿ ಕಂಡುಕೊಂಡಿರುವ ಪ್ರಜಾಪ್ರಭುತ್ವ ಪದ್ಧತಿ, ಅದಕ್ಕೆ ಸಮರ್ಥನೆ ನೀಡುವ ಸಂವಿಧಾನ, ಸ್ವತಂತ್ರ ನ್ಯಾಯಾಂಗ, ಕಾರ್ಯಾಂಗ ಮತ್ತು ಶಾಸಕಾಂಗಗಳು ಎಲ್ಲವೂ ಭಾರತದ ಸಂಸ್ಕೃತಿಯ ಮೂಲ ಪ್ರವಾಹದ ಚಿಲುಮೆಗಳೇ ಆಗಿವೆ. ಇದಕ್ಕೆ ವಿರೋಧವಾಗಿ, ವ್ಯತಿರಿಕ್ತವಾಗಿ ಬೆಳವಣಿಗೆಗಳು ಆಗಿದ್ದರೆ, ಅದಕ್ಕೆ ಕಾರಣ ಮಾನವನ ವ್ಯಕ್ತಿತ್ವದಲ್ಲಿಯ ಅಪೂರ್ಣತೆ.

ಇಂಥ ಅಪೂರ್ಣತೆಗಳ ಆಗರವಾಗಿರುವ ಇಂದಿನ ಸಮಾಜದ ಸುಧಾರಣೆಗಾಗಿ ಎಲ್ಲ ಕ್ಷೇತ್ರಗಳಲ್ಲಿ ಏಕಕಾಲಕ್ಕೆ ವಿರಾಟ ಪ್ರಯತ್ನ ನಡೆಯಬೇಕಿದೆ. ಆ ಕ್ಷೇತ್ರಗಳಲ್ಲಿ ಮುಖ್ಯವಾದವು ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ.

ಇಂದು ಜಾತಿ ಭೇದ ನೀತಿ ಹೆಮ್ಮರವಾಗಿ ಬೆಳೆದಿದೆ. ಇದಕ್ಕೆ ಕಾರಣರಾರು?

ಸವರ್ಣಿಯರೇ ಅಥವಾ ದಲಿತರೆ? ಅಥವಾ ಎರಡೂ ವರ್ಗದವರೆ? ಎರಡೂ ವರ್ಗಗಳಲ್ಲಿಯ ಎಲ್ಲ ಜನರೆ ಅಥವಾ ಅವರಲ್ಲಿ ಕೆಲವರು ಮಾತ್ರವೆ? ಈ ವಿಷವು ಭಾರತೀಯ ಸಮಾಜ ಜೀವನದಲ್ಲಿ ಬೆರೆಯಲು ಸಾಮ್ರಾಜ್ಯದಾಹಿ ವಿದೇಶಿ ಶಕ್ತಿಗಳು ಮತ್ತು ಧರ್ಮ ವಿಸ್ತಾರದ ದಾಹಹೊಂದಿರುವ ಧರ್ಮಗಳು ಕಾರಣವಾಗಿಲ್ಲವೆ? ಬಹುಮತ - ಅಲ್ಪಮತದ ರಾಜಕಾರಣ ಕಾರಣವಾಗಿಲ್ಲವೆ? ಇಂಥ ಅನೇಕ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳಬೇಕಿದೆ.

ಈ ನಿಟ್ಟಿನಲ್ಲಿ ಪ್ರಸ್ತುತ ರಾಜಕೀಯ ಹಾಗೂ ಸಾಮಾಜಿಕ ಪರಿಸ್ಥಿತಿಯಲ್ಲಿ ಉತ್ತರ ಕಂಡುಹಿಡಿಯಲು ಪ್ರಯತ್ನಿಸಿದವರಲ್ಲಿ ನಮ್ಮ ಯುಗದವರೇ ಆದ ಮಹಾತ್ಮಾಗಾಂಧೀ ಮತ್ತು ಡಾ॥ ಅಂಬೇಡ್ಕರ್. ಈ ಇಬ್ಬರೂ ಮಹನಿಯರು ಜಾತಿ ಭೇದ ನೀತಿಯನ್ನು, ಮುಖ್ಯವಾಗಿ ದಲಿತರ ದಮನವನ್ನು, ತಮ್ಮ ಎಲ್ಲ ಶಕ್ತಿ-ಸಾಮರ್ಥ್ಯಗಳೊಂದಿಗೆ ವಿರೋಧಿಸಿದರು. ಅವರಿಬ್ಬರ ಗುರಿ ಒಂದೇ ಆಗಿತ್ತು: ಸಮಾನತೆಯ ಸಮಾಜದ ನಿರ್ಮಿತಿ; ದಾರಿ ಬೇರೆ ಆಗಿದ್ದಿರಬಹುದು. ಈ ಸಮಸ್ಯೆಯ ಪರಿಹಾರಕ್ಕೆ ಗಾಂಧೀಜಿ ಜನಜಾಗೃತಿ, ಪ್ರಾಯಶ್ಚಿತ, ಉಪವಾಸ ಸತ್ಯಾಗ್ರಹದಂಥ ಸಾಧನಗಳನ್ನು ಉಪಯೋಗಿಸಿದರೆ, ಡಾ॥ ಅಂಬೇಡ್ಕರ ಸಂವಿಧಾನಾಂತರ್ಗತ ಶಾಸಕೀಯ ಕ್ರಮಗಳನ್ನು ಕೈಗೊಂಡರು. ಆದರೆ ಇವರೀರ್ವರು ಈ ಜಾತಿ ಭೇದ ನೀತಿಯನ್ನು ದೇಶದ ರಾಜಕೀಯ ಚೌಕಟ್ಟಿನಲ್ಲಿಟ್ಟರೇ ಹೊರತು ಅದನ್ನು ಎಂದೂ ಜಾಗತೀಕರಣಗೊಳಿಸಲು ಪ್ರಯತ್ನಿಸಲಿಲ್ಲ. ಲಂಡನ್ನಿನಲ್ಲಿ ನಡೆದ ದುಂಡು ಮೇಜಿನ ಪರಿಷತ್ತಿನಲ್ಲಿ ಈ ವಿಷಯ ಪ್ರಸ್ತಾಪಗೊಂಡಿತು, ನಿಜ. ಆದರೆ ಆ ದುಂಡು ಮೇಜಿನ ಪರಿಷತ್ತು ಭಾರತದ ರಾಜಕೀಯ ವಿಷಯಕ್ಕೇ ಸೀಮಿತವಾಗಿತ್ತು. ಗಾಂಧೀ ಮತ್ತು ಡಾ॥ ಅಂಬೇಡ್ಕರ್ ಇಡೀ ಭಾರತ ದೇಶದ ತುಳಿತಕ್ಕೊಳಗಾದವರ ಅಂತಃಸಾಕ್ಷಿಯಾಗಿದ್ದರು. ಅವರಷ್ಟು ಹೋರಾಟ ಮಾಡಿದವರು ಹಿಂದೆ ಇರಲಿಲ್ಲ ಮತ್ತು ಈಗಲೂ ಇಲ್ಲ. ಇಂದಿಗೂ ಅವರು ತೋರಿಸಿದ ದಾರಿಯೇ ಜಾತಿ ಭೇದ ನಿವಾರಣೆಗೆ ರಾಜಮಾರ್ಗವಾಗಿದೆ.

ಜಾತಿ ಭೇದ ನೀತಿಯನ್ನು ಜಾಗತೀಕರಣಗೊಳಿಸಲು ಪ್ರಯತ್ನಿಸುತ್ತಿರುವುದು ದೇಶದ ಇಂದಿನ ಹಿಂಸಾಮಯ ಪರಿಸ್ಥಿತಿಯಲ್ಲಿ ಸೂಕ್ತವಾಗಿಲ್ಲ. ಯಾವುದೇ ಸಾಮಾಜಿಕ ಭೇದ ಆಯಾ ಸಮಾಜದಲ್ಲಿರುವವರ ಸಹಕಾರ-ಅರಿವು-ಬಾಂಧವ್ಯಗಳ ಮೂಲಕ ಮಾತ್ರ ನಿವಾರಣೆಯಾಗಲು ಸಾಧ್ಯವೇ ಹೊರತು ನೆಲದ ಮೇಲಿನ ಸಂಗತಿಯನ್ನು ಗಗನಕ್ಕೆ ಒಯ್ದರೆ ಸಾಧ್ಯವಾದೀತೆ? ವಿಶ್ವರಾಷ್ಟ್ರ ಸಂಸ್ಥೆಯ ವೇದಿಕೆಯ ಮೇಲೆ ಈ ವಿಷಯವನ್ನು ಪ್ರಸ್ತಾಪಿಸಿದರೆ

ಆಗುವ ಪ್ರಯೋಜನವೇನು? ಆ ವೇದಿಕೆಯಲ್ಲಿ ಜಾತಿ ಭೇದ ಕಟುವಾದ ಟೀಕೆಗೆ ಗುರಿಯಾಗಬಹುದು ಮತ್ತು ಜನಾಂಗೀಯ ಭೇದಕ್ಕೆ ಸರಿಸಮಾನ ವೆಂದೂ ಅರ್ಥೈಸಲ್ಪಡಬಹುದು. ಆದರೆ ಆ ಕೆಲಸವನ್ನು ಭಾರತದ ಸಂವಿಧಾನ ಮತ್ತು ಭಾರತೀಯ ಜನತೆ ಒಕ್ಕೊರಲಿನಿಂದ ಮಾಡಿದ್ದಾರೆ. ಆದ್ದರಿಂದ ಡರ್ಬಾನ್‌ಗೆ ಈ ವಿಷಯವನ್ನು ಸಾಗಿಸಿಕೊಂಡು ಹೋಗುವ ಪ್ರಯತ್ನ ಒಂದು ಕ್ಷುಲ್ಲಕ ರಾಜಕೀಯ ಪ್ರಯತ್ನವಾಗುತ್ತದೆಯೇ ಹೊರತು ಭಾರತದಲ್ಲಿಯ ದಲಿತ ಸಮುದಾಯಕ್ಕೆ ಎಳ್ಳಷ್ಟೂ ಉಪಕಾರವಾಗಲಾರದು.

ಇದು ನಮ್ಮೆಲ್ಲರ ಅಭಿಪ್ರಾಯವಾಗಬಹುದಲ್ಲವೆ? ★

ಓದುಗರಲ್ಲಿ ಮತ್ತು ಲೇಖಕರಲ್ಲಿ ಅರಿಕೆ

ಜನಪದ ವಿಚಾರದಲ್ಲಿ ಪ್ರಕಟಗೊಂಡಿರುವ ಲೇಖನಗಳಲ್ಲಿಯ ವಿಚಾರಗಳ ಬಗ್ಗೆ ಓದುಗರು ತಮ್ಮ ಅನಿಸಿಕೆ, ಅಭಿಪ್ರಾಯ ಇತ್ಯಾದಿಗಳನ್ನು ತಿಳಿಸಬೇಕಾಗಿ ಕೋರಿಕೆ. ಅವುಗಳನ್ನು ಪ್ರಕಟಿಸಲಾಗುವುದು.

ಲೇಖಕರು ಸ್ವಂತ ವೈಚಾರಿಕ ಕೃತಿಗಳನ್ನೂ, ಅನುವಾದಿತ ಕೃತಿ ಗಳನ್ನೂ ಪ್ರಕಟಣೆಗಾಗಿ ಕಳುಹಿಸಬೇಕಾಗಿ ಕೋರಿಕೆ.

ವ್ಯಕ್ತಿ ವಿಚಾರ............

ಲೂಯಿ ಪಾಶ್ಚರ್ ವಿಜ್ಞಾನಯುಗದ ಮಹಾನ್ ಸಂತ

-ವಿನೋಬಾ

[ಇಡೀ ಆಧ್ಯಾತ್ಮಿಕ ಚಿಂತನದ ಗುರಿ 'ಗುಣಗ್ರಹಣ' ಎಂಬುದಾಗಿ ಭಾವಿಸಿದ್ದ ಸಂತ ವಿನೋಬಾ ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು; ಕಾರಾಗೃಹ ವಾಸ ಅನುಭವಿಸಿದ್ದರು; ಆಶ್ರಮಗಳನ್ನು ಸ್ಥಾಪಿಸಿದ್ದರು. ಅವರು ಕೆಲವು ಚಿಂತಕರನ್ನು ರೇಖಾ ಚಿತ್ರಣದಂತೆ ಪರಿಚಯ ಮಾಡಿಕೊಟ್ಟಿದ್ದಾರೆ. ಅಂಥ ಲೇಖನಗಳ ಸರಣಿಯಲ್ಲಿ ಇದು ಹದಿನಾಲ್ಕನೆಯದು. ಸಂ]

ನಮ್ಮ ತಂದೆಯವರು ಮನೆಯಲ್ಲಿ ನಮಗೆ ಕೆಲವು ಒಳ್ಳೆಯ ಮಾತುಗಳನ್ನು ಹೇಳುತ್ತಿದ್ದರು. ಅವುಗಳಲ್ಲಿಯ ವಿಜ್ಞಾನ ಕುರಿತಾದ ಕೆಲವು ಉದಾಹರಣೆಗಳು ನನ್ನ ಮನಸ್ಸಿನ ಆಳದಲ್ಲಿ ನೆಲೆನಿಂತಿವೆ.

ಒಮ್ಮೆ ಫ್ರಾನ್ಸ್ ದೇಶದಲ್ಲಿ ಅಲ್ಲಿಯ ಸರ್ವಶ್ರೇಷ್ಠ ವ್ಯಕ್ತಿಗಳ ಹೆಸರುಗಳ ಬಗ್ಗೆ ಜನಾಭಿಪ್ರಾಯವನ್ನು ಕೋರಲಾಗಿತ್ತು. ಲಕ್ಷಾಂತರ ಜನ ಹೆಸರುಗಳನ್ನು ಬರೆದು ಕಳುಹಿಸಿದರು. ಅವುಗಳಲ್ಲಿ ಇವು ಮೂರು ಮುಖ್ಯವಾಗಿದ್ದವು:- ೧. ಲೂಯಿ ಪಾಶ್ಚರ್ ೨. ವಿಕ್ಟರ್ ಹ್ಯೂಗೋ ೩. ನೆಪೋಲಿಯನ್.

ಇಡೀ ಪ್ರಪಂಚವೇ ನೆಪೋಲಿಯನ್‌ನ ಹೆಸರನ್ನು ತಿಳಿದಿದೆ. ಅವನು ಬಹಳೇ ಪರಾಕ್ರಮಿ. ಆದರೆ ಅಲ್ಲಿಯ ಜನ ಅವನಿಗೆ ಮೂರನೇ ಸ್ಥಾನವನ್ನು ಕೊಟ್ಟರು, ಜನರಿಗೆ ಹೊಸ ವಿಚಾರಗಳತ್ತ ಆಕರ್ಷಣೆಯಾಗಿದ್ದರೂ ಕೂಡ ದೇಶದ ತುಂಬ ಪಾಶ್ಚರನ್ ಹೆಸರು ಮೊದಲನೆಯದು ಮತ್ತು ವಿಕ್ಟರ್‌ನ ಹೆಸರು ಎರಡನೆಯದು. ಹ್ಯೂಗೋ ದೊಡ್ಡ ಸಾಹಿತಿಯಾಗಿದ್ದರು. ಅವರ ಕೃತಿಗಳು ಮನೆಮನೆಯಲ್ಲಿ ಓದಲ್ಪಡುತ್ತಿವೆ. ವಿಜ್ಞಾನಿ ಲೂಯಿ ಪಾಶ್ಚರ್ ಮಹಾನ್ ಕರುಣಾಳು ಮತ್ತು ಬುದ್ಧಿವಂತನಾಗಿದ್ದ. ಅವನು ಕಂಡುಹಿಡಿದ ಎಲ್ಲ ಶೋಧನೆಗಳು ಎಲ್ಲರ ಕಾಯಿಲೆಗಳ ಉಪಚಾರಕ್ಕೆ ಸಹಾಯಕವಾಗಿವೆ. ಆದ್ದರಿಂದ ಜನರು ಅವನಿಂದ ಬಹಳ ಉಪಕಾರವಾಯಿತೆಂದು ತಿಳಿದಿದ್ದಾರೆ. ನಾನು ಈ ಉದಾಹರಣೆ ಕೊಟ್ಟ ಉದ್ದೇಶ್ಯ: ನೀವು ಈಗ ಯೋಚನೆ ಮಾಡಿರಿ ಈ ಶೋಧನೆಗಳು ಆಧ್ಯಾತ್ಮಿಕವೇ ಅಥವಾ ವ್ಯವಹಾರಿಕವೆ ಎಂದು.

ನನ್ನ ಪಾದಯಾತ್ರೆಯ ಸಮಯದಲ್ಲಿ ಒಬ್ಬ ಯುರೋಪಿಯನ್ ನನಗೆ ಮುದ್ರಿತ ಶುಭಾಶಯದ ಕಾರ್ಡ್ ಕೊಟ್ಟ. ಅದರಲ್ಲಿ ಲೂಯಿ ಪಾಶ್ಚರ್‌ನ ಚಿತ್ರ ಮತ್ತು ಅದರ ಕೆಳಗೆ ಈ ವಾಕ್ಯವಿತ್ತು:-

"ನಾನು ನಿಮ್ಮ ಧರ್ಮ ಯಾವುದೆಂಬುದನ್ನು ತಿಳಿಯಲು ಇಷ್ಟ ಪಡುವುದಿಲ್ಲ. ನಿಮ್ಮ ವಿಚಾರಗಳೇನು ಎಂಬುದನ್ನು ತಿಳಿಯಲೂ ಇಷ್ಟ ಪಡುವುದಿಲ್ಲ. ನಿಮ್ಮ ದುಃಖ ಏನು ಎಂಬುದನ್ನು ಮಾತ್ರ ತಿಳಿಯ ಬಯಸುತ್ತೇನೆ ಅಷ್ಟೆ ಮತ್ತು ಅದನ್ನು ದೂರ ಮಾಡುವುದಕ್ಕೆ ಸಹಾಯ ಮಾಡಬಯಸುತ್ತೇನೆ."

ನನ್ನ ಮೇಲೆ ಈ ಮಾತಿನದು ಬಹಳ ಪ್ರಭಾವ ಉಂಟಾಯಿತು. ಅವು ನನಗೆ ಉಪನಿಷತ್ ವಾಕ್ಯಕ್ಕೆ ಸಮನಾಗಿ ಕಂಡವು. ಅನೇಕರಿಗೆ ತಮ್ಮ ವಿಚಾರ ಮತ್ತು ತಮ್ಮ ವಿಶಿಷ್ಟ ಧರ್ಮದ ಕಲ್ಪನೆಯನ್ನು ಬೇರೆ ಜನರ ಮೇಲೆ ಹೇರ ಬೇಕೆಂಬ ಉತ್ಸಾಹ ಇರುತ್ತದೆ. ಪ್ಯಾಶ್ಚರನ ಮಾತಿನ ಪ್ರಕಾರ ಇದು ನಿರ ರ್ಥಕ ಪ್ರವೃತ್ತಿಯಾಗಿದೆ. ವಿಚಾರದಾತನೂ ಮತ್ತು ಧರ್ಮಶಾಸ್ತ್ರನೂ ಪರಮೇ ಶ್ವರನೇ ಆಗಿದ್ದಾನೆ. ಆ ಶಕ್ತಿ ಅವನದೇ ಆಗಿದೆ. ಆ ಕೆಲಸವನ್ನು ಮಾಡಲು ನಾವು ಅವಕಾಶ ಮಾಡಿಕೊಡೋಣ. ನಾವೆಲ್ಲರೂ ಪ್ರಪಂಚದ ದುಃಖವನ್ನು ದೂರ ಮಾಡಲು ಕೆಲಸ ಮಾಡೋಣ. ಆಗ ಸದ್ವಿಚಾರ ಸಹಜವಾಗಿ ಹರಡುವುದು ಮತ್ತು ನಿಜಧರ್ಮ ಎಲ್ಲರಿಗೂ ತನ್ನ ತಾನೆ ಪ್ರಾಪ್ತವಾಗುವುದು. ದುಃಖಿತರ ಸೇವೆಯೇ ಸದ್ವಿಚಾರ ಮತ್ತು ಶ್ರೇಷ್ಠ ಸದ್ಧರ್ಮವಾಗಿದೆ.

ಪಾಶ್ಚರನ್ ಮರಣ ೧೮೯೫ ರಲ್ಲಿ ಆಯಿತು. ನನ್ನ ಜನ್ಮ ಕೂಡ ಆ ವರ್ಷದಲ್ಲಿಯೇ ಆಯಿತು. ಆದ್ದರಿಂದ ೧೮೯೫ ಸಹಜವಾಗಿಯೇ ನನ್ನ ಮನಸ್ಸಿ ನಲ್ಲಿ ಉಳಿದುಬಿಟ್ಟಿತು.

ಈ ಕಾಲಾವಧಿಯಲ್ಲಿ ಪ್ರಪಂಚದಲ್ಲಿ ಕೋಟ್ಯಾಂತರ ರೋಗಿಗಳ ಬಾಯಲ್ಲಿ ರಾಮನಾಮಕ್ಕೆ ಸಮಾನವಾಗಿ ಪಾಶ್ಚರನ ಹೆಸರು ಉಳಿದಿದೆ. ಪಾಶ್ಚರನ ಹೆಸರಿನ ಸಂಸ್ಥೆಗಳು ದೇಶ – ವಿದೇಶಗಳಲ್ಲಿ ಸ್ಥಾಪಿತಗೊಂಡಿವೆ ಮತ್ತು 'ಪಾಶ್ಚರೀಕರಣ' (ಪಾಶ್ಚರೈಜೇಶನ್) ಒಂದು ಹೊಸ ಧಾತುವೇ ವಿಶ್ವಭಾಷೆಗಳಲ್ಲಿ ರೂಢಿಗೆ ಬಂದಿದೆ. ರೋಗಪೀಡಿತವಾದ ಜಗತ್ತಿಗೆ ಅವನ ಶೋಧನೆಗಳಿಂದ ಬಹಳಷ್ಟು ಸಾಂತ್ವನ ದೊರೆತಿದೆ. ಇಷ್ಟು ದೊಡ್ಡ ಕೆಲಸ ಅವನದು. ಆದರೆ ಅವನು ನಿರಹಂಕಾರದ ಮೂರ್ತಿಯಾಗಿದ್ದ. ನಾನಂತೂ ಅವನನ್ನು ವಿಜ್ಞಾನಯುಗದ ಒಬ್ಬ ಮಹಾನ್ ಸಂತನೆಂದೇ ತಿಳಿಯುತ್ತೇನೆ. ☆

(ಮೈತ್ರಿ ಸಾಭಾರ ಅನು: ಸು. ಕೌ.)

ಪಾದಯಾತ್ರೆ ಒಂದು ವಿನೂತನ ಶಕ್ತಿ

–ಅಗ್ನೈಯರ್

ಇಪ್ಪತ್ತನೆಯ ಶತಮಾನದ ಉತ್ತರಾರ್ಧವು ಅನೇಕ ವೈಜ್ಞಾನಿಕ ತೀವ್ರ ಬೆಳವಣಿಗೆಗಳ ಕಾಲ. ಅಂಥ ವಿಜ್ಞಾನಗಳಲ್ಲಿ ಈ 'ಪಾದಯಾತ್ರೆ'ಯೂ ಒಂದು ವೈಜ್ಞಾನಿಕ ಶೋಧನೆ, ಕೊಡುಗೆ. ಇದನ್ನು ಬಳಸಿಕೊಂಡು ಶಿಕ್ಷಣ, ರಾಜಕಾರಣ, ಸಂಸ್ಕೃತಿ, ಆರ್ಥಿಕ ಮತ್ತು ಇನ್ನಿತರ ಕ್ಷೇತ್ರಗಳ ನಿಜವಾದ ವಿಕಾಸ ಸರಿಸಿಟ್ಟಿನಲ್ಲಿ ನಡೆಯಬೇಕಿದೆ.

'ಚರೈವೇತಿ ಚರೈವೇತಿ' ವೇದ ವಿಜ್ಞಾನವೇ ಇದೆ. ಎಲ್ಲ ರಾಷ್ಟ್ರಗಳಲ್ಲೂ ಬಹುಹಿಂದಿನಿಂದಲೇ ಪಾದಯಾತ್ರೆಯಿಂದ ಸಮಾಜಸೇವೆ, ಆತ್ಮಕಲ್ಯಾಣ ಎಲ್ಲವನ್ನೂ ಸಾಧಿಸುತ್ತಾ ಬಂದಿರುವುದು ಕಂಡುಬರುತ್ತದೆ. ಸುತ್ತಮುತ್ತ ಅಡ್ಡಾಡುವ ಪರಿ ವ್ರಾಜಕರ ತಂಡವೇ ಎಂದಿಗೂ, ಎಲ್ಲೂ ಮಹತ್ತನ್ನು ಸಾಧಿಸಿದೆ. ಶ್ರೀರಾಮ ದಂಡಕಾರಣ್ಯವನ್ನು ಹೆಂಡತಿ ಹಾಗೂ ತಮ್ಮನೊಡನೆ ಪಾದಯಾತ್ರೆಯಿಂದ ಸಂಚರಿಸಿದುದರಿಂದಲೇ ಭಯಭೀತರಾದ ಋಷಿಗಳಿಗೆಲ್ಲಾ ಸಂತಸವಾಯಿತು. ಶಬರಿ, ಭಾರದ್ವಾಜಾದಿಗಳ ಭಕ್ತಿಯೂ ಕೈಗೂಡಿತು. ಸಂದುಗೊಂದುಗಳಲ್ಲಿ ಅಡಗಿದ್ದ ಆಸುರೀ ಪ್ರಕೃತಿಯ ಶೋಧನೆಯಾಯಿತು. ಅಂದಿನ ಇಡೀ ರಾಕ್ಷಸೀ ಸಂಪತ್ತಿಯ ನಿರ್ಮೂಲನದ ಬಗ್ಗೆ ಪರಿಶೋಧನೆಯೂ ಆಯಿತು. ಇತ್ತ ಕರ್ನಾಟಕದಲ್ಲಿರುವ ಹನುಮಂತನ ಮೂಲಕ, ಅತ್ತ ಲಂಕೆಯಲ್ಲಿ ವಿಭೀಷಣನ ಮೂಲಕ ಒಳ್ಳೆಯ ರಾಜ್ಯ ವ್ಯವಸ್ಥೆಯಾಯಿತು.

ಎಲ್ಲ ಉದಾಹರಣೆಗಳನ್ನು ಹೇಳಲಾಗದಿದ್ದರೂ ಬುದ್ಧದೇವನ ಪಾದ ವಿಹಾರದಿಂದಲೇ, ನಲವತ್ತು ವರ್ಷಗಳ ಸತತ ಸಹಜ ಶೂನ್ಯ ಸಂಚಾರದಿಂದಲೇ, ಅಹಿಂಸೆ, ಕರುಣೆಯ ಜಾಗತಿಕ ವಿಕಾಸವಾಯಿತು. ಅತ್ತ ಯೇಸುಕ್ರಿಸ್ತ, ಕನ್‌ಫ್ಯೂಷಿಯಸ್, ಪೈಗಂಬರ್ ಮುಂತಾದ ಧರ್ಮಬೋಧಕರೆಲ್ಲರೂ ಪಾದಯಾತ್ರೆ ಮಾಡಿದುದರಿಂದಲೇ ಆಯಾಯ ಮಾನವೀಯ ಧರ್ಮಗಳು ಪುನರುಜ್ಜೀವನ ಕಂಡವು. ಜೈನರ ಪಾದಯಾತ್ರಾ ವ್ರತದಿಂದಲಂತೂ ಪ್ರಾಣಿದಯೆ ಮತ್ತೆ ಚಿಗುರಿತು. ಹೀಗೆ ಎಲ್ಲ ಸಾಧು ಶರಣರೂ, ಓಡಿ ತಿರುಗುವ ಯೋಗಿಗಳೂ, ಆಳ್ವಾರುಗಳೂ, ಆಚಾರ್ಯರೂ, ಮಧ್ಯಕಾಲದ ಸಂತರೂ ಆಸೇತುಹಿಮಾಚಲ ಕಾಲನಿಂದಲೇ ನಡೆದು ರಾಷ್ಟ್ರದ ಏಕತೆಗೆ ದೊಡ್ಡ ಬುನಾದಿ ಹಾಕಿದರು.

ಇತ್ತೀಚಿನ ಸ್ವಾತಂತ್ರ್ಯದ ಪೂರ್ವ ಯುಗದಲ್ಲೂ ಮಹಾತ್ಮಾಜಿಯವರು ತಮ್ಮ ಉಪ್ಪಿನ ಸತ್ಯಾಗ್ರಹವನ್ನು ದಂಡಿ ಪಾದಯಾತ್ರೆಯಿಂದಲೇ ಆರಂಭಿಸಿ ಸ್ವಾತಂತ್ರ್ಯ ಪ್ರಾಪ್ತಿಯ ಅನಂತರ ಹಿಂದೂ – ಮುಸ್ಲಿಂ ಐಕ್ಯತೆಗಾಗಿ ನೌಖಾಲಿ

ಪಾದಯಾತ್ರೆಯನ್ನು ಮುಗಿಸಿಹೋದರು.

೧೯೫೦ ರ ಸಮಯದಲ್ಲಿ ರಜಾಕರ ಮತ್ತು ಕಮ್ಯೂನಿಸ್ಟರ ಹೈದರಾಬಾದಿನ ಒಳನಾಡಿನಲ್ಲಿ ಹಿಂಸಾ ಕಾರ್ಯಕ್ರಮಗಳು ಬಿಸಿಯೇರಿ ನೆಹರೂ ಅವರ ಪ್ರಾರ್ಥನೆಯ ಮೇರೆ ವಿನೋಬಾ ಅವರು ಕಾಲಿನಿಂದಲೇ ಪಯಣ ಬೆಳೆಸಿ ಹಿಂಸೆಗೆ ಮೂಲಕಾರಣವಾಗಿದ್ದ ಭೂಮಿಯ ಕ್ರಯ, ವಿಕ್ರಯ, ಅಸಮಾನ ಹಂಚಿಕೆ ಮುಂತಾದ ವಿಷಮ ಸಮಸ್ಯೆಯನ್ನು ಸತ್ಯ – ಪ್ರೇಮ – ಕರುಣೆಯ ಮಾಧ್ಯಮದಿಂದ ಬಿಡಿಸಿ ಅಪೂರ್ವ ಸಂಶೋಧನೆಗೆ ನಿಮಿತ್ತರಾದರು. ಜಗತ್ತಿನ ಉಳಿದೆಲ್ಲ ಸಮಸ್ಯೆಗಳಿಗೂ ಮೂಲಭೂತವಾದ ಭೂಮಿಯ ಬಗೆಗೆ ಒಂದು ಶಾಶ್ವತ ಶಾಂತಿದಾಯಕ ಮಾನವೀ ವಿಚಾರ ಕ್ರಾಂತಿಯನ್ನು ಸಾಕಾರಗೊಳಿಸಿದರು. ತಮ್ಮ ೧೫ ವರ್ಷಗಳ ಅಖಂಡ ಭಾರತ ಹಾಗೂ ಪೂರ್ವ ಪಾಕಿಸ್ತಾನದ ಮಹಾಪಾದಯಾತ್ರೆಯಿಂದ.

ಸಾವಿರಾರು ತರುಣ, ತರುಣಿಯರು ದೇಶ ವಿದೇಶಗಳಿಂದ ಆಕರ್ಷಿತರಾಗಿ ಈ ೨೦ ನೇ ಶತಮಾನದ ಉತ್ತರಾರ್ಧದ ಭೂಕ್ರಾಂತಿಯ ಜಂಗಮ ಪಾದಯಾತ್ರಾ ವಿಶ್ವವಿದ್ಯಾಲಯಕ್ಕೆ ಸೇರಿದರು. ಹೊಸದಾದ ಅನುಭವಪೂರ್ಣ ಸಾಹಿತ್ಯ ನಿರ್ಮಾಣವೇ ಆಯಿತು. ದಿಕ್ಕು ಕಾಣದಾಗಿದ್ದ ಸಮಾಜ ಸೇವಕರಿಗೆ, ಆತ್ಮಶುದ್ಧೀಕರಣದ ಸಾಧಕರಿಗೆ ಒಳ್ಳೆಯ ವಿದ್ಯಾಸ್ಥಾನವಾಯಿತು; ಜನಪ್ರಾತಿನಿಧಿಕ ಸರಕಾರಗಳಿಗೂ ಮಾರ್ಗದರ್ಶಕವಾಯಿತು.

ಇಂಥ ಸಂದರ್ಭದಲ್ಲಿ ಶಿಕ್ಷಣ ಕ್ಷೇತ್ರಗಳಲ್ಲಿರುವವರು ಈ ಪಾದಯಾತ್ರಾ ವಿಜ್ಞಾನವನ್ನು ತಮ್ಮ ತಮ್ಮ ಶಾಲೆ ಹಾಗೂ ವಿಶ್ವವಿದ್ಯಾನಿಲಯಗಳಲ್ಲಿ ಜೀವಂತವಾದ ಅನುಭವವನ್ನು ಮೌಲ್ಯವಾಗಿ ಸ್ವೀಕರಿಸಿ ಜಗತ್ತಿನ ಜ್ವಲಂತ ಸಮಸ್ಯೆಗೆ ಮೌಲಿಕ ಪರಿಹಾರವನ್ನು ಕಂಡುಹಿಡಿದು, ಪ್ರಜಾಪ್ರಭುತ್ವದ ಅಪಾಯಗಳನ್ನು ತೊಲಗಿಸಿ, ಗ್ರಾಮಸ್ವರಾಜ್ಯ ಸ್ಥಾಪನೆಗೆ ಶಕ್ತಿ ಕೇಂದ್ರಗಳಾಗಬೇಕಾದ ತುರ್ತು ಪರಿಸ್ಥಿತಿ ಬಂದಿದೆ.

ನಿಜವಾದ ಜನಸಂಪರ್ಕ, ಪ್ರಜಾಭಿಪ್ರಾಯದ ಸತ್ಯವಾದ, ತಟಸ್ಥ ಅರಿವು, ಸಮಸ್ಯೆಯ ಮೂಲ ಮತ್ತು ಶಾಶ್ವತ ಪರಿಹಾರ ಮುಂತಾದವುಗಳು ಪಾದಯಾತ್ರೆಯಿಂದ ಮಾತ್ರ ದೊರೆಯಲು ಸಾಧ್ಯ. ★

ದಲಿತೋದ್ಧಾರಕ ಕುದ್ಮುಲ್ ರಂಗರಾವ್

–ಲಕ್ಷ್ಮಣಕೊಡಸೆ

ಕಳೆದ ಇಪ್ಪತ್ತನೇ ಶತಮಾನದಲ್ಲಿ ಕರಾವಳಿ ಸಮುದಾಯದ ಬದುಕು ಅರ್ಥಪೂರ್ಣವಾಗಲು ಶ್ರಮಿಸಿದ ವಿಭೂತಿ ಪುರುಷರು ಹಲವರು. ಸಾಹಿತ್ಯ ಕ್ಷೇತ್ರದಲ್ಲಿ ಶಿವರಾಮ ಕಾರಂತರಂಥ ಮೇರು ವ್ಯಕ್ತಿತ್ವ ರೂಪುಗೊಳ್ಳುವ ಮೊದಲೇ ಸಾಮಾಜಿಕ ಸೇವೆಗಳಲ್ಲಿ ಮೊಳಹಳ್ಳಿ ಶಿವರಾಯರು, ದೇಶಭಕ್ತ ಕಾರ್ನಾಡ್ ಸದಾಶಿವರಾಯರು ತಮ್ಮ ವಿಧಾಯಕ ಕಾರ್ಯಗಳಿಂದ ಪ್ರಖ್ಯಾತರಾಗಿದ್ದರು. ಕಾರ್ನಾಡ್ ಸದಾಶಿವರಾಯರಿಗೆ ಮೊದಲೇ ಸಮಾಜ ಸೇವೆಯನ್ನು ತಪಸ್ಸಿನಂತೆ ಕೈಗೊಂಡಿದ್ದ ಮಾನವತಾವಾದಿ ಕುದ್ಮುಲ್ ರಂಗರಾಯರು.

ಕಾಸರಗೋಡಿನ ಸಾರಸ್ವತ ಬ್ರಾಹ್ಮಣ ಸಮಾಜಕ್ಕೆ ಸೇರಿದ್ದ ಅವರು ಕೈಗೊಂಡಿದ್ದ ದಲಿತೋದ್ಧಾರದ ಕಾರ್ಯಗಳು ಸ್ವತಃ ಮಹಾತ್ಮಾ ಗಾಂಧೀಜಿ ಅವರಿಗೆ ಮಾರ್ಗದರ್ಶಿಯಾದ್ದವು. ೧೯೩೪ ರಲ್ಲಿ ಮಂಗಳೂರಿಗೆ ಭೇಟಿ ನೀಡಿದ್ದ ಗಾಂಧೀಜಿ, "ಕುದ್ಮುಲ್ ರಂಗರಾಯರು ದಲಿತರ ಸೇವೆಯ ಕಾರ್ಯವನ್ನು ಕೈಗೊಳ್ಳುವುದಕ್ಕೆ ನನಗೆ ಗುರುವಾಗಿ ಪ್ರೇರಣೆ ನೀಡಿದರು" ಎಂದು ಕೃತಜ್ಞತೆಯಿಂದ ಸ್ಮರಿಸಿದ್ದರು.

ದೇಶದಲ್ಲಿ ದಲಿತರ ಏಳಿಗೆಯ ಯಾವ ಚಿಂತನೆಯೂ ಇಲ್ಲದಿದ್ದಾಗ ಅದನ್ನು ತಪಸ್ಸಿನಂತೆ ಕೈಗೊಂಡು ಸ್ವಜಾತೀಯ, ಸವರ್ಣೀಯರ ಖಂಡನೆ, ಬಹಿಷ್ಕಾರಗಳನ್ನು ಎದುರಿಸಿದ್ದ ಮಹಾಮಾನವ ಕುದ್ಮುಲ್ ರಂಗರಾಯರು. ಅಸ್ಪೃಶ್ಯರಿಗಾಗಿ ಮೊದಲ ಶಾಲೆಯನ್ನು ಮಂಗಳೂರಿನ ಚಿಲಿಂಬಿನಲ್ಲಿ ತೆರೆದಾಗ ಬಾಬಾ ಸಾಹೇಬ್ ಅಂಬೇಡ್ಕರ್ ಒಂದು ವರ್ಷದ ಮಗು. ಗಾಂಧೀಜಿ ಭಾರತದ ಸಾಮಾಜಿಕ ರಾಜಕೀಯ ಕ್ಷೇತ್ರದಲ್ಲಿ ಇನ್ನೂ ಪ್ರವೇಶ ಮಾಡಿರಲಿಲ್ಲ. ಆದ್ದರಿಂದಲೇ ಕರಾವಳಿಯಲ್ಲಿ ಕುದ್ಮುಲ್ ರಂಗರಾವ್ ಪ್ರಾರಂಭಿಸಿದ ಈ ಸಾಮಾಜಿಕ ಜಾಗೃತಿ ಐತಿಹಾಸಿಕವಾಗಿ ಮಹತ್ವದ್ದು.

ಗಾಂಧೀಜಿಯವರಿಗಿಂತ ಸುಮಾರು ಹತ್ತು ವರ್ಷ ಮೊದಲು (೨೯ ನೇ ಜೂನ್ ೧೮೫೯) ಕಾಸರಗೋಡು ಜಿಲ್ಲೆಯ ಕುದ್ಮುಲ್ ಎಂಬಲ್ಲಿ ಮಧ್ಯಮ ವರ್ಗದ ದೇವಯ್ಯ–ಗೌರಿ ದಂಪತಿಗಳ ಹಿರಿಯ ಮಗನಾಗಿ ಜನಿಸಿದ ರಂಗರಾಯರು ಬಡತನದಲ್ಲಿ ಬಾಲ್ಯ ಕಳೆದರು. ಬಹು ಕಷ್ಟದಿಂದ ಕಾಸರಗೋಡಿನಲ್ಲಿ ಬಾಲ್ಯ ಶಿಕ್ಷಣವನ್ನು ಮುಗಿಸಿದ ಅವರು ೧೬ ನೇ ವಯಸ್ಸಿನಲ್ಲಿ ತಂದೆಯನ್ನು ಕಳೆದುಕೊಂಡರು. ತಾಯಿ ಹಾಗೂ ಆರು ಮಂದಿ ಸೋದರ ಸೋದರಿ

ಯರನ್ನು ಸಾಕುವುದಕ್ಕಾಗಿ ಉದ್ಯೋಗ ಅರಸಿ ಮಂಗಳೂರಿಗೆ ಬಂದರು. ತಿಂಗಳಿಗೆ ೮ ರೂಪಾಯಿ ವೇತನದ ಅಧ್ಯಾಪಕ ವೃತ್ತಿ ಕೈಗೊಂಡರು. ಅಧ್ಯಾಪಕರಾಗಿದ್ದ ಕಾಲದಲ್ಲಿಯೇ ಮೆಟ್ರಿಕ್ಯುಲೇಶನ್ ಪರೀಕ್ಷೆಗೆ ಖಾಸಗಿಯಾಗಿ ಕುಳಿತು ತೇರ್ಗಡೆ ಹೊಂದಿದರು. ಅತ್ಯಂತ ಪರಿಶ್ರಮದಿಂದ ಅಂದಿನ ಪ್ಲೀಡರ್‌ಶಿಪ್ (ವಕಾಲತ್) ಪರೀಕ್ಷೆಯಲ್ಲೂ ಉತ್ತೀರ್ಣರಾದರು. ನಂತರ ಅಧ್ಯಾಪಕ ವೃತ್ತಿ ತ್ಯಜಿಸಿ ಮಂಗಳೂರಿನ ಜಿಲ್ಲಾ ನ್ಯಾಯಾಲಯದಲ್ಲಿ ವಕೀಲಿ ವೃತ್ತಿ ಕೈಗೊಂಡರು.

ಸತ್ಯ ಮತ್ತು ನ್ಯಾಯಕ್ಕಾಗಿ ಬಡಜನರ, ದೀನದಲಿತರ ವಕಾಲತ್ತುಗಳನ್ನೇ ವಹಿಸಿಕೊಂಡು ಅವರಿಗಾಗುತ್ತಿರುವ ಅನ್ಯಾಯ ವಂಚನೆಗಳ ವಿರುದ್ಧ ಹೋರಾಡುತ್ತಿದ್ದ ರಂಗರಾಯರು ಅದರಲ್ಲಿಯೇ ಹೆಚ್ಚಿನ ಯಶಸ್ಸು ಪಡೆದರು. ಬಡವರ ವಕೀಲರಾಗಿ ಪ್ರಸಿದ್ಧರಾದರು. ರಂಗರಾಯರ ಆದರ್ಶ ವ್ಯಕ್ತಿತ್ವ, ಪ್ರಾಮಾಣಿಕತೆ ಆಗಿನ ಇಂಗ್ಲೀಷ್ ನ್ಯಾಯಾಧೀಶರನ್ನೂ ಆಕರ್ಷಿಸಿತ್ತು.

ಆಗ ದಕ್ಷಿಣ ಕನ್ನಡ ಜಿಲ್ಲೆ ಬ್ರಿಟಿಷರ ಆಳ್ವಿಕೆಯ ಮದ್ರಾಸ್ ಪ್ರಾಂತ್ಯಕ್ಕೆ ಸೇರಿತ್ತು. ಬ್ರಿಟಿಷ್ ಸರ್ಕಾರ ಜಿಲ್ಲೆಯ ದೀನದಲಿತರ ಶ್ರೇಯೋಭಿವೃದ್ಧಿಗಾಗಿ ಪ್ರತ್ಯೇಕ ಇಲಾಖೆ ತೆರೆದಿತ್ತು. ಅಸ್ಪೃಶ್ಯರಿಗೆ ಪ್ರತ್ಯೇಕ ಶಾಲೆ, ಕಾಲೋನಿ, ಬಾವಿ, ದರಖಾಸ್ತಿನಲ್ಲಿ ಭೂಮಿ ಹಂಚಿಕೆಯ ಯೋಜನೆಗಳನ್ನು ರೂಪಿಸಿತ್ತು. ವೆಲೆನ್ಸಿಯಾ ಬಳಿ ನಂದಿಗುಡ್ಡೆ ಮೆಟ್ಟಿಕಲ್ ಎಂಬಲ್ಲಿ ತೆರೆದಿದ್ದ ಅಸ್ಪೃಶ್ಯರ ಶಾಲೆಯಲ್ಲಿ ೪ ನೇ ತರಗತಿವರೆಗೆ ಕಲಿತಿದ್ದ ಬೆಂದೂರು ಬಾಬು ಎಂಬುವವರಿಗೆ ಜಿಲ್ಲಾ ನ್ಯಾಯಾಲಯದಲ್ಲಿ ಪೇದೆಯಾಗಿ ನಿಯುಕ್ತಿ ಮಾಡಿದ್ದು ಕೋರ್ಟಿನಲ್ಲಿ ಕೆಲಸ ಮಾಡುವ ಸವರ್ಣೀಯ ನೌಕರರಿಗೆ ಸಹಿಸಲು ಶಕ್ಯವಾಗಲಿಲ್ಲ. ಈ ಸಂದರ್ಭದಲ್ಲಿ ದೀನದಲಿತರ ಬಂಧು ಎಂದು ಪ್ರಸಿದ್ಧರಾಗಿದ್ದ ರಂಗರಾಯರನ್ನು ಕರೆದ ಅಂದಿನ ಇಂಗ್ಲೀಷ್ ನ್ಯಾಯಾಧೀಶರು, "ಕೋರ್ಟಿನಲ್ಲಿ ಪೇದೆ ಕೆಲಸ ಮಾಡುವುದರಿಂದ ಅಸ್ಪೃಶ್ಯರ ಉದ್ಧಾರ ಸಾಧ್ಯವಿಲ್ಲ. ಅವರಿಗೆ ವಿದ್ಯಾಭ್ಯಾಸ ಕೊಡಿಸುವಂತೆ ನೀವು ಏನಾದರೂ ಮಾಡಿ" ಎಂದು ಸಲಹೆ ಮಾಡಿದರು.

ಮೊದಲೇ ದೀನದಲಿತರ ಹೀನಾಯ ಸ್ಥಿತಿಯ ಬಗ್ಗೆ ಕಾಳಜಿ ಹೊಂದಿದ್ದ ರಂಗರಾಯರಿಗೆ ಅಸ್ಪೃಶ್ಯರ ಬದುಕಿನ ಸುಧಾರಣೆಗಾಗಿ ಶ್ರಮಿಸುವ ಅವಕಾಶ ಪ್ರಾಪ್ತವಾಯಿತು. ವಕೀಲಿ ವೃತ್ತಿ ತ್ಯಜಿಸಿ ತಮ್ಮ ೩೦ ನೇ ವಯಸ್ಸಿನಲ್ಲಿಯೇ ಆಧ್ಯಾತ್ಮದ ಕಡೆ ಮನಸ್ಸು ತಿರುಗಿಸಿ ದೀನ ದಲಿತರ ಉದ್ಧಾರಕ್ಕೆ ದುಡಿಯಲು ಸಂಕಲ್ಪಿಸಿದರು.

ತಮ್ಮದೇ ಹಣದಿಂದ ೧೮೯೨ ರಲ್ಲಿ ಮಂಗಳೂರಿನ ಉರ್ವ ಚಿಲಿಂಬಿಯ ಬಳಿ ಹುಲ್ಲು ಮನೆಯಲ್ಲಿ ದಲಿತ ಮಕ್ಕಳಿಗಾಗಿ ಮೊದಲ ಶಾಲೆಯನ್ನು ರಂಗ

ರಾಯರು ತೆರೆದರು. ರಂಗರಾಯರು ಅಸ್ಪೃಶ್ಯರಿಗಾಗಿ ಶಾಲೆ ತೆರೆದ ವರ್ಷಕ್ಕೆ ಡಾ॥ ಬಾಬಾಸಾಹೇಬ್ ಅಂಬೇಡ್ಕರ್ ಅವರಿಗೆ ಕೇವಲ ಒಂದು ವರ್ಷ ಪ್ರಾಯ ವಾಗಿತ್ತು. ರಂಗರಾಯರು ದಲಿತರ ಏಳಿಗೆಗಾಗಿ ಸಮಗ್ರ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದ ಡಿಪ್ರೆಸ್ಡ್ ಕ್ಲಾಸಸ್ ಮಿಷನ್' (ಡಿಸಿಎಂ) ಸಂಸ್ಥೆಯನ್ನು ೧೮೯೭ ರಲ್ಲಿ ಕೊಡಿಯಾಲಬೈಲಿನಲ್ಲಿ ಸ್ಥಾಪಿಸಿದಾಗ ೭ ನೇ ವರ್ಷಕ್ಕೆ ಕಾಲಿಟ್ಟಿದ್ದ ಅಂಬೇಡ್ಕರ್ ಅಂಬೇವಾಡಿಯ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾಭ್ಯಾಸಕ್ಕೆ ಸೇರ್ಪಡೆಯಾಗಿದ್ದರು.

ಚಿಲಿಂಬಿಯ ಶಾಲೆಗೆ ಸವರ್ಣೀಯರ ತೀವ್ರ ವಿರೋಧ ವ್ಯಕ್ತವಾದ ಮೇಲೆ ಅದನ್ನು ಮುಚ್ಚಿ ಕಂಕನಾಡಿ. ಬೋಳೂರಿನಲ್ಲಿ ಪ್ರಾಥಮಿಕ ಶಾಲೆಗಳನ್ನು ತೆರೆದಾಗ ಹಿಂದೂ ಅಧ್ಯಾಪಕರೇ ಬರಲಿಲ್ಲ. ರಂಗರಾಯರು ಕ್ರೈಸ್ತ ಅಧ್ಯಾಪಕರನ್ನು ನೇಮಿಸಿಕೊಂಡರು. ಮಂಗಳೂರಿನ ಶೇಡಿಗುಡ್ಡೆಯ ಕೋರ್ಟ್ ಗುಡ್ಡೆ ಇಳಿಜಾರು ಸ್ಥಳದಲ್ಲಿಯೂ ಒಂದು ಶಾಲೆ ತೆರೆದರು. ವೃತ್ತಿಪರ ಶಿಕ್ಷಣವನ್ನು ನೀಡುವ ಕೈಗಾರಿಕೆ ತರಬೇತಿ ಶಾಲೆಯನ್ನು ಶೇಡಿಗುಡ್ಡೆಯಲ್ಲಿ ತೆರೆದರು. ಅಲೆಮಾರಿಯಾಗಿದ್ದ ಮೂಲನಿವಾಸಿ ಕೊರಗರ ಹತ್ತು ಕುಟುಂಬಗಳಿಗೆ ಶೇಡಿಗುಡ್ಡೆಯಲ್ಲಿಯೇ ಆಶ್ರಯಕೊಟ್ಟರು. ಅವರ ಕಸಬುಗಳಿಗೆ ಸಹಾಯ ಮಾಡಿದರು. ಉಡುಪಿ, ಪುತ್ತೂರುಗಳಲ್ಲಿಯೂ ಕೊರಗರಿಗೆ ಹೆಚ್ಚಿನ ಸಂಖ್ಯೆಯಲ್ಲಿ ದರಖಾಸ್ತು ಜಮೀನುಗಳನ್ನು ಕೊಡಿಸಿದರು. ಶೇಡಿಗುಡ್ಡೆಯಲ್ಲಿಯೇ ದಲಿತ ವಿದ್ಯಾರ್ಥಿನಿಯರಿಗೆ ಹೆಣ್ಣುಮಕ್ಕಳ ನಿಲಯವನ್ನು ಕಟ್ಟಿಸಿದರು. ತಾವು ಸ್ಥಾಪಿಸಿದ ಶಾಲೆಗಳಲ್ಲಿ ನಾಲ್ಕನೇ ತರಗತಿವರೆಗೆ ಕಲಿತ ದಲಿತ ಯುವಕರಿಗೆ ಶಿಕ್ಷಕ ತರಬೇತಿ ಕೊಡಿಸಿ ಇತರ ಶಾಲೆಗಳಿಗೆ ಅಧ್ಯಾಪಕರನ್ನಾಗಿ ನೇಮಿಸುತ್ತಿದ್ದರು.

ಜಿಲ್ಲೆಯ ಅಂದಿನ ಶ್ರೀಮಂತರಿಂದ ಜಮೀನನ್ನು ಕ್ರಯಕ್ಕೆ ಹಾಗೂ ಮೂಲಗೇಣಿಗೆ ಪಡೆದು ದಲಿತರಿಗೆ ಮನೆಗಳನ್ನು ಕಟ್ಟಲು ಹಾಗೂ ಕೃಷಿ ಮಾಡಲು ವಿತರಿಸಿದರು. ಅವರ ಉಪವೃತ್ತಿಗೆ ನೆರವು ನೀಡಿದರು. ಬಜ್ಪೆ, ಕಾಪಿಕಾಡು ದಡ್ಡಲಕಾಡ್ ಮತ್ತು ಇನ್ನಿತರ ಕಾಲೊನಿಗಳಲ್ಲಿ ದಲಿತರಿಗೆ ಜಮೀನು ವಿತರಣೆಮಾಡುವಾಗ ರಂಗರಾಯರು 'ಜಮೀನನ್ನು ಪರಿಶಿಷ್ಟರಲ್ಲದವರಿಗೆ ಯಾವ ಕಾರಣದಿಂದಲೂ ಪರಭಾರೆ ಮಾಡಬಾರದು. ದಲಿತರಿಗೆ ಪರಭಾರೆ ಮಾಡುವುದಿದ್ದರೂ ತಮ್ಮ ಡಿಸಿಎಂ ಸಂಸ್ಥೆಯ ಅನುಮತಿ ಪಡೆಯಬೇಕು' ಎಂಬ ನಿಬಂಧನೆ ವಿಧಿಸಿದ್ದರು.

ರಂಗರಾಯರು ತಮ್ಮ ಶಾಲೆಗಳಲ್ಲಿ ಮೂಲ ಶಿಕ್ಷಣವನ್ನು ಜಾರಿಗೆ

ತಂದಿದ್ದರು. ಅವರ ಶಾಲೆಗಳಲ್ಲಿ ವೃತ್ತಿಶಿಕ್ಷಣ ಕಲಿಸುವ ವ್ಯವಸ್ಥೆ ಇತ್ತು. ಬಡಗಿ ಕೆಲಸ, ನೇಯ್ಗೆ, ತೋಟಗಾರಿಕೆ, ಕಸೂತಿ ಮತ್ತು ರೇಷ್ಮೆ ಹುಳ ಸಾಕಣೆ, ತಕಲಿಯಲ್ಲಿ ನೂಲು ತೆಗೆಯುವುದು ಮೊದಲಾದವನ್ನು ಕಲಿಸಲಾಗುತ್ತಿತ್ತು. ಅವರು ಮಂಗಳೂರು, ತೋಕೂರು, ಬೋಳೂರು, ದಡ್ಡಲಕಾಡ್, ಜೆಪ್ಪು, ಅತ್ತಾವರ, ತಲಪಾಡಿ, ಉಳ್ಳಾಲ, ಮುಲ್ಕಿ, ಉಡುಪಿ ಬನ್ನಂಜೆ, ನೇಜಾರು, ಪುತ್ತೂರು ಮುಂತಾದ ಕಡೆ ಸ್ಥಾಪಿಸಿದ ಶಾಲೆಗಳನ್ನು ಹಲವು ವರ್ಷಗಳ ಕಾಲ ಸ್ವಂತವಾಗಿ ನಡೆಸಿಕೊಂಡು ಬಂದರು, ಆದರೆ ಆರ್ಥಿಕ ಬಿಕ್ಕಟ್ಟಿನ ಕಾರಣ ಕೆಲವನ್ನು ಸರ್ಕಾರದ ವಶಕ್ಕೆ ಒಪ್ಪಿಸಬೇಕಾಯಿತು.

ಜಿಲ್ಲಾ ಬೋರ್ಡ್ ಮತ್ತು ಮಂಗಳೂರು ಪುರಸಭೆಯಲ್ಲಿ ರಂಗರಾಯರ ಒತ್ತಡದ ಕಾರಣ ದಲಿತರಿಗೆ ಪ್ರಾತಿನಿಧ್ಯ ದೊರೆಯುವಂತಾಯಿತು. ದಲಿತರಲ್ಲಿ ಸಹಕಾರ ಪ್ರವೃತ್ತಿ ಬೆಳೆಯಲು 'ಕೋರ್ಟ್‌ಹಿಲ್ ಆದಿದ್ರಾವಿಡ ಸಹಕಾರ ಸಂಘ'ವನ್ನು ಶೇಡಿಗುಡ್ಡೆಯಲ್ಲಿ ಸ್ಥಾಪಿಸಿದರು. ಅನಾಥ ಮಹಿಳೆಯರಿಗಾಗಿ, ಬಾಲ ವಿಧವೆಯರಿಗಾಗಿ ಆಶ್ರಮಗಳನ್ನು ತೆರೆದರು. ಈ ಆಶ್ರಮಗಳಲ್ಲಿ ಜಾತಿ ಭೇದವಿಲ್ಲದೆ ಎಲ್ಲ ಜಾತಿಯ ಅನಾಥ ವಿಧವೆಯರನ್ನು ಸೇರಿಸಿ ಅವರಿಗೆ ರಕ್ಷಣೆ ಹಾಗೂ ಜೀವನೋಪಾಯದ ಮಾರ್ಗಗಳನ್ನು ಕಲ್ಪಿಸಿಕೊಟ್ಟರು.

ರಂಗರಾಯರು ದಲಿತರ ಏಳಿಗೆಯ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾಗ ಅದನ್ನು ಮಡಿವಂತರು ಸಹಿಸಿಕೊಳ್ಳಲಿಲ್ಲ. ಅವರಿಗೆ ಸಾರಸ್ವತ ಸಮಾಜದ ದೇವಾಲಯಗಳಲ್ಲಿ ಪ್ರವೇಶ ಇರಲಿಲ್ಲ. ಕ್ಷೌರಿಕರು ಕೂಡ ರಂಗರಾಯರನ್ನು ಬಹಿಷ್ಕರಿಸಿದರು. ಅಗಸರೂ ಬಟ್ಟೆಗಳನ್ನು ಮಡಿ ಮಾಡಲು ನಿರಾಕರಿಸಿದರು. ರಂಗರಾಯರ ಹೆಣ್ಣುಮಕ್ಕಳನ್ನು ಸಾರ್ವಜನಿಕವಾಗಿ ಅವಮಾನ ಮಾಡುವ ಬೆದರಿಕೆಗಳು ಬರತೊಡಗಿದವು. ರಂಗರಾಯರು ರಸ್ತೆಯಲ್ಲಿ ನಡೆಯುವಾಗ ಅವಮಾನಿಸುವ ಘಟನೆಗಳೂ ನಡೆಯುತ್ತಿದ್ದವು.

ತಾವು ಕಟ್ಟಿದ್ದ ಎಲ್ಲ ಸಂಸ್ಥೆಗಳನ್ನು ಆರ್ಥಿಕ ಅಡಚಣೆಯ ಕಾರಣ ಸರ್ಕಾರಕ್ಕೆ ಹಾಗೂ ಭಾರತ ಸೇವಾ ಸಂಘಕ್ಕೆ ವಹಿಸಿಕೊಟ್ಟ ನಂತರ ರಂಗರಾಯರು ಆಧ್ಯಾತ್ಮಿಕರಾದರು. ಸನ್ಯಾಸ ಸ್ವೀಕರಿಸಲು ನಿರ್ಧರಿಸಿದರು. ತಮ್ಮ ಸಮಾಜ ಸೇವೆಗಾಗಿ ಸರ್ಕಾರ ನೀಡಿದ್ದ 'ರಾವ್‌ಸಾಹೇಬ್' ಬಿರುದಿನ ಪದಕ ಹಾಗೂ ಸೇವಾ ದಾಖಲೆಯ ಪತ್ರಗಳನ್ನು ಸನ್ಯಾಸ ಸಮಾರಂಭದ ಹೋಮ ಕುಂಡದಲ್ಲಿ ಅಗ್ನಿಗೆ ಸಮರ್ಪಿಸಿದರು.

ಅಸ್ಪೃಶ್ಯ ಸಮುದಾಯದಲ್ಲಿಯೇ ಅತಿ ಹಿಂದುಳಿದಿದ್ದ ತೋಟಿ ಪಂಗಡ

ದವರು ತಮ್ಮ ಪಾರ್ಥಿವ ಶರೀರವನ್ನು ಸ್ಮಶಾನಕ್ಕೆ ಒಯ್ಯಬೇಕು ಎಂಬುದು ರಂಗರಾಯರ ಕೊನೆಯ ಆಸೆಯಾಗಿತ್ತು. "ಈ ಪಂಗಡದವರಿಗೆ ನನ್ನ ಜೀವಿತಕಾಲದಲ್ಲಿ ಹೆಚ್ಚಿನ ಸೇವೆ ಮಾಡಲು ಸಾಧ್ಯವಾಗಲಿಲ್ಲ. ಕೊನೆಗೆ ಅವರ ಸ್ಪರ್ಶದಿಂದಲಾದರೂ ನನ್ನ ಆತ್ಮಕ್ಕೆ ಚಿರಶಾಂತಿ ಲಭಿಸೀತು" ಎಂಬ ಹಿರಿಯಾಸೆಯನ್ನು ಅವರು ತಮ್ಮ ಉಯಿಲಿನಲ್ಲಿ ವ್ಯಕ್ತಪಡಿಸಿದ್ದರು. ಅಂತೆಯೇ ರಂಗರಾಯರು ೧೯೨೮ನೇ ಇಸವಿ ಜನವರಿ ೩೦ ರಂದು ಪರಂಧಾಮ ಸೇರಿದಾಗ, ದಲಿತರೇ ಅವರನ್ನು ಅತ್ತಾವರದ ಬಾಬುಗುಡ್ಡೆಯ ರುದ್ರಭೂಮಿಯಲ್ಲಿ ಅತ್ಯಂತ ಭಕ್ತಿಯಿಂದ ಅಂತ್ಯಸಂಸ್ಕಾರ ನಡೆಸಿದರು. (೩೦ ವರ್ಷಗಳ ನಂತರ ಅದೇ ದಿನ ಗಾಂಧೀಜಿ ಹುತಾತ್ಮರಾದರು).

ತಮ್ಮ ಜೀವಿತ ಕಾಲದಲ್ಲಿ ದಲಿತನೊಬ್ಬ ಎಸ್ಸೆಸ್ಸೆಲ್ಲಿ ಉತ್ತೀರ್ಣನಾಗಬೇಕು ಎಂಬುದು ಅವರ ಆಸೆಯಾಗಿತ್ತು. "ನಮ್ಮ ವಿದ್ಯಾಸಂಸ್ಥೆಯಲ್ಲಿ ಕಲಿತ ದಲಿತ ಯುವಕ ಪದವೀಧರನಾಗಿ ಉನ್ನತ ಉದ್ಯೋಗ ಪಡೆದು ಅವನದೇ ಆದ ಕಾರಿನಲ್ಲಿ ಹೋಗುತ್ತಿರುವುದನ್ನು ನಾನು ಕಣ್ಣಾರೆ ಕಾಣಬೇಕು. ಆತನ ಕಾರಿನಿಂದ ಏಳುವ ದೂಳು ನನ್ನ ನೆತ್ತಿಗೆ ಬಿದ್ದಾಗ ನನ್ನ ಬದುಕು ಸಾರ್ಥಕವಾಗುತ್ತದೆ ಎಂಬ ಹಿರಿಯಾಸೆಯನ್ನೂ ಪ್ರಕಟಿಸಿದ್ದರು." ಈ ಎರಡೂ ಆಸೆಗಳು ಅವರ ಜೀವಿತಕಾಲದಲ್ಲಿ ಈಡೇರಲಿಲ್ಲ.

ಕುದ್ಮುಲ್ ರಂಗರಾಯರ ಸಮಾಧಿ ಸ್ಥಳವನ್ನು ರಾಜಘಾಟ್ ಮಾದರಿಯಲ್ಲಿ ಪವಿತ್ರ ಭೂಮಿಯನ್ನಾಗಿ ಅಭಿವೃದ್ಧಿ ಪಡಿಸಲು ದಕ್ಷಿಣ ಕನ್ನಡ ಜಿಲ್ಲೆಯ ದಲಿತ ನೌಕರರ ಹಿತರಕ್ಷಣಾ ಸಮಿತಿ ಕ್ರಮ ಕೈಗೊಂಡಿದೆ. ಮಂಗಳೂರು ಮಹಾನಗರ ಪಾಲಿಕೆಯೂ ಕುದ್ಮುಲ್ ಅವರ ಸಮಾಧಿ ಸ್ಥಳದ ಸುತ್ತಲಿನ ಪರಿಸರವನ್ನು ಅಭಿವೃದ್ಧಿಪಡಿಸಲು ಮುಂದೆ ಬಂದಿದೆ. ಸಮಾಧಿ ಸುತ್ತ ಸ್ಮಾರಕ ಗೋಪುರವೊಂದನ್ನು ನಿರ್ಮಿಸಲಾಗಿದ್ದು ಬಾಬಾ ಸಾಹೇಬ್ ಅಂಬೇಡ್ಕರ್ ಅವರ ೧೧೦ನೇ ಜನ್ಮದಿನವಾದ ೨೦೦೧ನೇ ಏಪ್ರಿಲ್ ೧೪ರಂದು ಅದನ್ನು ಸಮಾಜಕ್ಕೆ ಸಮರ್ಪಿಸಲಾಯಿತು.

ದಲಿತರ ಏಳಿಗೆಯ ವಿಚಾರದಲ್ಲಿ ಐತಿಹಾಸಿಕವಾದ ಅತ್ಯಾಸಕ್ತಿಯನ್ನು ತಾಳಿ ಅದರಂತೆ ನಡೆದುಕೊಂಡಿದ್ದ ವಿಭೂತಿ ಪುರುಷ ಕುದ್ಮುಲ್ ರಂಗರಾಯರ ಮಾನವೀಯತೆ ಹಾಗೂ ಸೇವಾಪರತೆ ಪ್ರಸ್ತುತ ದಲಿತ ಸಮುದಾಯಕ್ಕೆ ಮಾತ್ರವಲ್ಲದೆ ಸಾಮಾಜಿಕ ಬದಲಾವಣೆಯ ಬಗ್ಗೆ ಚಿಂತನೆಯುಳ್ಳ ಎಲ್ಲರಿಗೂ ಸ್ಮರಣಯೋಗ್ಯವಾಗಿದೆ. ★

('ಪ್ರಜಾವಾಣಿ' ಸಾಭಾರ)

ನ್ಯಾಯ ಮತ್ತು ಶಾಂತಿಗಾಗಿ ವಿಶ್ವಜನತೆಯ ವೇದಿಕೆ ಅಗತ್ಯ

ಪ್ರೊ|| ಬಿ. ಆರ್. ಪ್ರಾಣೇಶರಾವ್

ತತ್ವಕ್ಕೆ ಬದ್ಧರಾಗಿರುವ ವ್ಯಕ್ತಿಗಳು ಒಂದೆಡೆ ಸೇರಿದಾಗ ಮತ್ತು ವಿವಿಧ ಮಹತ್ವದ ವಿಷಯಗಳನ್ನು ಕುರಿತು ಚರ್ಚೆ ನಡೆಸುವಾಗ ಮೊಟ್ಟ ಮೊದಲನೆಯ ಕೆಲಸ ತೀವ್ರತಮವಾದ ಆತ್ಮಶೋಧನೆಯೇ ಆಗಿರುತ್ತದೆ. ಇಂದು ನಮ್ಮ ರಾಷ್ಟ್ರ ಅನೇಕ ಗಂಭೀರರೂಪದ ಸಮಸ್ಯೆಗಳನ್ನು ಎದುರಿಸುತ್ತಿರುವಾಗ ಸರ್ವೋದಯ ಸಮಾಜವು ಏಕೆ ತನ್ನ ಪ್ರಭಾವಬೀರಲು ಸಾಧ್ಯವಾಗಿಲ್ಲ ಎಂಬ ವಿಷಯವಾಗಿ ನಾವು ಆಲೋಚಿಸಬೇಕಾಗಿದೆ. ಜನರ ಸಾಮಾನ್ಯ ಜೀವನದಲ್ಲಿ ಏಕೆ ಇಷ್ಟೊಂದು ಕ್ರಿಯಾಹೀನತೆಯುಂಟಾಗಿದೆ? ರಾಷ್ಟ್ರದ ಆಗುಹೋಗುಗಳಲ್ಲಿ ಗಾಂಧೀವಿಚಾರದ ವ್ಯಕ್ತಿಗಳು ಲೆಕ್ಕಕ್ಕೇ ಬರುವುದಿಲ್ಲವೆಂಬ ಅನಿಸಿಕೆ ಬುದ್ಧಿಜೀವಿಗಳಲ್ಲಿಯ ಕೆಲ ಪ್ರಭಾವಿವ್ಯಕ್ತಿಗಳಲ್ಲಿ ಮೂಡಿದೆ. ಯಾವುದಾದರೂ ಮೀಟಿಂಗಿನಲ್ಲಿ ಅಥವಾ ಸಭೆಯಲ್ಲಿ ಪರಸ್ಪರ ಪರಿಚಯ ಮಾಡಿಕೊಡುವ ಸಂದರ್ಭ ಬಂದಾಗ ಗಾಂಧೀವಿಚಾರದ ವ್ಯಕ್ತಿಯನ್ನು 'ನಶಿಸಿ ಹೋಗುತ್ತಿರುವ ಒಂದು ಜನಾಂಗಕ್ಕೆ ಸೇರಿದವನೆಂದೇ' ಪರಿಚಯಿಸಲಾಗುತ್ತದೆ. ಗಾಂಧೀಜಿ ಯಾವುದೇ ಗಾಂಧೀವಾದಿಗಳ ಒಂದು ಪಂಗಡವನ್ನು ರಚಿಸಲಿಲ್ಲವೆಂಬ ಮಾತನ್ನೇ ಅವರು ತಿಳಿದಂತಿಲ್ಲ ಅಥವಾ ಆ ಸಂಗತಿಯನ್ನು ಅವರು ಮರೆಯುತ್ತಾರೆ. ಗಾಂಧೀಜಿ ಹೊಸ-ದಾರಿ ಶೋಧಕರಾಗಿದ್ದರೇ ಹೊರತು ವ್ಯವಸ್ಥಾ ನಿರ್ಮಾಪಕರಾಗಿರಲಿಲ್ಲ. ತುಳಿತ ಮತ್ತು ಶೋಷಣೆಯ ವಿರುದ್ಧ ಹೋರಾಡಲು ಸತ್ಯ ಮತ್ತು ಅಹಿಂಸೆಯ ಆಧಾರದ ಮೇಲೆ ಸರಿಸಾಟಿಯಿಲ್ಲದ ಒಂದು ಶಸ್ತ್ರವನ್ನು ಅವರು ಸಂಯೋಜಿಸಿದರು. ವ್ಯಕ್ತಿ ಸ್ವಾತಂತ್ರ್ಯ, ಸಮಾನತೆ ಮತ್ತು ಸಾಮಾಜಿಕ ನ್ಯಾಯ ಈ ಮೌಲ್ಯಗಳ ಮೇಲೆ ನಿಂತ ಒಂದು ಸಮಾಜ ವ್ಯವಸ್ಥೆಯನ್ನು ಅವರು ಕಲ್ಪಿಸಿಕೊಂಡಿದ್ದರು. ಅವರು ಎಲ್ಲ ಪ್ರಕಾರದ ಶೋಷಣೆ ಮತ್ತು ಅಸಮಾನತೆಗೆ ವಿರೋಧಿಯಾಗಿದ್ದರು. ಅವರಿಗೆ ವ್ಯಕ್ತಿಯ ಹಿತವೇ ಪರಮೋಚ್ಚ ಅಳತೆಗೋಲಾಗಿತ್ತು. ಸಮಾಜದಲ್ಲಿ ಯಾರು ಅತ್ಯಂತ ದುರ್ಬಲರೂ ಮತ್ತು ಅವಕಾಶ ವಂಚಿತರೂ ಆಗಿದ್ದಾರೋ ಅಂಥವರನ್ನು ಸಮಾಜದ ಇತರ ಜನರೊಂದಿಗೆ ಸರಿಸಮಾನರನ್ನಾಗಿ ಮಾಡಬೇಕೆಂಬುದು ಅವರ ಜೀವಿತೋದ್ದೇಶ್ಯವಾಗಿತ್ತು. ಸತ್ಯಾಗ್ರಹ ಮತ್ತು ಸರ್ವೋದಯದಂಥ ಉತ್ತುಂಗ ವಿಚಾರಗಳು ವಿಶ್ವವ್ಯಾಪಿಯಾಗಿ ಮನೋಹರವಾಗಿವೆ. ಅನ್ಯಾಯ ಮತ್ತು ದುರಾಚರ್ಯಗಳ

ವಿರುದ್ಧ ಒಬ್ಬ ವ್ಯಕ್ತಿ ಒಬ್ಬಂಟಿಗನಾಗಿಯೇ ಆಗಲಿ ಅಥವಾ ವ್ಯಕ್ತಿಗಳ ಒಂದು ಸಮೂಹವೇ ಆಗಲಿ ಸತ್ಯಾಗ್ರಹದ ಶಸ್ತ್ರವನ್ನು ಯಶಸ್ವಿಯಾಗಿ ಚಲಾಯಿಸ ಬಹುದಾಗಿದೆ. ಗಾಂಧೀಜಿಯವರು ಈ ಸತ್ಯಾಗ್ರಹದಲ್ಲಿಯ ಅಂತರ್‌ನಿಹಿತ ಶಕ್ತಿಯನ್ನು ದಕ್ಷಿಣ ಆಫ್ರಿಕಾ ಮತ್ತು ಭಾರತದಲ್ಲಿ ತೋರ್ಪಡಿಸಿದ್ದಾರೆ. ಜನ ಕೋಟಿಯನ್ನು ಸಂಘಟಿಸುವ ಕಲೆಯಲ್ಲಿ ಅವರು ಮುತ್ಸದ್ದಿಯಾಗಿದ್ದರು. ಹಿಂಸೆ ಯಿಲ್ಲದೆ ಯುದ್ಧವನ್ನು ಮತ್ತು ದ್ವೇಷವಿಲ್ಲದೆ ಹೋರಾಟವನ್ನು ಹೇಗೆ ನಡೆಸ ಬಹುದೆಂಬ ತಂತ್ರವನ್ನು ಮಾನವಕುಲಕ್ಕೆ ಅವರು ಕಲಿಸಿದರು. ಇಡೀ ಮಾನವಕುಲವೇ ಗಾಂಧೀಜಿಯವರ ವಿಚಾರದ ಉತ್ತರಾಧಿಕಾರಿಯಾಗಿದೆ.

ಮಹಾತ್ಮ ಗಾಂಧೀಜಿ ವಿಚಾರ ಮತ್ತು ಕ್ರಿಯೆಗಳ ಮಹಾನ್ ನಾಯಕ ರಾಗಿದ್ದರು. ಅವರ ವಿಚಾರ ಹಾಗೂ ಕಾರ್ಯತಂತ್ರಗಳಿಂದ ಪ್ರಭಾವಿತವಾಗಿ ಭಾರತ ಹಾಗೂ ವಿದೇಶಗಳಲ್ಲಿ ಅನೇಕ ಆಂದೋಲನಗಳು ನಡೆದಿವೆ. ಅಮೇರಿಕೆಯ ೧೯೯೯ರ ಡಿಸೆಂಬರ್ ೩೧ರ 'ಟೈಮ್' ಪತ್ರಿಕೆಯ ಸಂಚಿಕೆಯಲ್ಲಿ ಕೆಲವು ಸಮಕಾಲೀನ ಪ್ರಮುಖ ಹೋರಾಟಗಾರರ ಹೆಸರುಗಳು ಪ್ರಕಟಿಸಲ್ಪಟ್ಟಿವೆ. ಅವರೆಲ್ಲರೂ ಮಹಾತ್ಮಾ ಗಾಂಧೀಜಿಯವರ ಉತ್ತರಾಧಿಕಾರಿಗಳೆಂದು ಆ ಪತ್ರಿಕೆ ಕರೆದಿದೆ. ಆ ಹೆಸರುಗಳಲ್ಲಿ ಪ್ರಮುಖವಾದುವುಗಳು: ಮಾರ್ಟಿನ್ ಲೂಥರ್ ಕಿಂಗ್ (ಕಿರಿಯ), ನೆಲಸನ್ ಮಂಡೇಲಾ, ದ. ಆಫ್ರಿಕಾದ ದೇಶಮಾಂಡ್ ಟುಟು, ಪೋಲೆಂಡಿನ ಲೆಚ್ ವಲೇಶಾ, ಟಿಬೆಟ್ಟಿನ ದಲೈಲಾಮಾ, ಮ್ಯಾನಾರಿನ ಶ್ರೀಮತಿ ಆಂಗ್ ಸಾನ್ ಸೂಕಿ. ಈ ಎಲ್ಲ ಮುಖಂಡರು ಗಾಂಧೀಜಿಯವರ ವಿಚಾರ ಧಾರೆಯನ್ನೇ ಮಾತನಾಡುತ್ತಾರೆ. ಇವರೆಲ್ಲರೂ ಗಾಂಧೀಜಿಯವರ ವಿಚಾರ ಮತ್ತು ಕ್ರಿಯೆಗಳಿಂದ ಬಹಳಷ್ಟು ಪ್ರಭಾವಿತರಾಗಿದ್ದಾರೆ. ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವಕ್ಕಾಗಿ ಮ್ಯಾನಾರಿನಲ್ಲಿ ಹೋರಾಟ ಮಾಡುತ್ತಿರುವ ಆಂಗ್ ಸಾನ್ ಸೂಕಿ ಅಹಿಂಸೆಯನ್ನೇ ಪ್ರತಿಪಾದಿಸುತ್ತಾರೆ. ಈ ಮಹಾನ್ ಗಾಂಧೀ ವಿಚಾರದ ಹೋರಾಟಗಾರ್ತಿಗೆ ನಮಸ್ಕರಿಸೋಣ ಮತ್ತು ಅವಳ ಹೋರಾಟದಲ್ಲಿ ಜಯಸಿಗಲೆಂದು ಪ್ರಾರ್ಥಿಸೋಣ.

ನಮ್ಮ ದೇಶದಲ್ಲಿ ನಡೆದ ಭೂದಾನ ಆಂದೋಲನವು ಸ್ವಾತಂತ್ರ್ಯ ನಂತರದ ಮಹತ್ವದ ಸಾಧನೆಯಾಗಿದೆ. ಭೂದಾನ ಆಂದೋಲನದ ಸಾಧನೆಯನ್ನು ನಿದಿರ್ಷ್ಟವಾಗಿ ಹೇಳಲು ಸಾಧ್ಯವಿಲ್ಲವಾದರೂ ಭೂ ಮಾಲಿಕತ್ವ ಮತ್ತು ಭೂರಹಿತ ಕೃಷಿಕಾರ್ಮಿಕರನ್ನೂ ಒಳಗೊಂಡಂತೆ ಭೂಮಿಯ ಸಮಾನ ಹಂಚಿಕೆಯ ಹಿಂದೆ ಇರುವ ಸಮಾನತೆಯ ವಿಚಾರವನ್ನು ಪ್ರತಿಪಾದಿಸುವುದರಲ್ಲಿ ಅದು ಯಶಸ್ವಿಯಾಯಿತೆಂದು ಎಲ್ಲರೂ ಒಪ್ಪುತ್ತಾರೆ. ದೇಶದಲ್ಲಿ ಭೂ ಸುಧಾರಣೆ

ಯನ್ನು ಜಾರಿಗೆ ತರುವುದಕ್ಕೆ ಅನುಕೂಲವಾದ ವಾತಾವರಣವನ್ನು ಅದು ನಿರ್ಮಿಸಿತು. ಆದರೆ ಅದನ್ನು ಮುಂದೆ ನಡೆಸಿಕೊಂಡು ಬರಲು ಸಾಧ್ಯ ವಾಗುವಂಥ ಸಂಘಟನೆಯ ಅಭಾವದಿಂದಾಗಿ ಅದು ಕ್ರಮೇಣ ನಿಂತುಹೋಯಿತು.

೧೯೭೦ರ ದಶಕದ ಮಧ್ಯಕಾಲದಲ್ಲಿ ದೇಶದಲ್ಲಿ ಸಂಭವಿಸಬಹುದಾಗಿದ್ದ ಸರ್ವಾಧಿಕಾರದ ವಿರುದ್ಧ ಯಶಸ್ವಿ ಹೋರಾಟವನ್ನು ನಡೆಸಿ ಪುನಃ ಪ್ರಜಾ ಪ್ರಭುತ್ವವನ್ನು ಸ್ಥಾಪಿಸಿದ ಜೇ.ಪಿ. ಆಂದೋಲನ ಒಂದು ಐತಿಹಾಸಿಕ ಮಹತ್ವದ ಘಟನೆ. ಇಂದಿನ ದೇಶದ ಪರಿಸ್ಥಿತಿಯಲ್ಲಿ ಬಹಳ ಪ್ರಸ್ತುತವಾಗಿ ದ್ದರೂ ಜೇ. ಪಿ. ಯವರ ಸಮಗ್ರ ಕ್ರಾಂತಿಯ ಕನಸು ನೆನಸಾಗದೇ ಉಳಿಯಿತು.

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಆಚಾರ್ಯ ವಿನೋಬಾ ಭಾವೆ ಮತ್ತು ಜಯಪ್ರಕಾಶ ನಾರಾಯಣ ಇಬ್ಬರೂ ಗಾಂಧೀ ವಿಚಾರದ ಆಂದೋಲನಗಳನ್ನು ಪರಿಣಾಮಕಾರಿಯಾಗಿ ನಡೆಸಿದರಷ್ಟೇ ಅಲ್ಲ ಸರ್ವೋದಯ ವಿಚಾರದ ಕ್ಷಿತಿಜ ವನ್ನು ವಿಸ್ತರಿಸಿದರು ಕೂಡ.

ಕಳೆದು ಹೋದ ಶತಮಾನದ ಎಂಭತ್ತರ ದಶಕದ ಪ್ರಾರಂಭದಿಂದಲೂ ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಬಹಳಷ್ಟು ಬದಲಾವಣೆ ಯುಂಟಾಗಿದೆ. ರಶಿಯಾದ ಪತನದ ನಂತರ ಅಮೇರಿಕ ಸಂಯುಕ್ತ ಸಂಸ್ಥಾನ ಇಡೀ ವಿಶ್ವದ ದೊಡ್ಡ ಶಕ್ತಿಯಾಗಿ ಹೊರಹೊಮ್ಮಿದೆ. ವಿಶ್ವೀಕರಣ ಮತ್ತು ಉದಾರೀಕರಣದ ಹೊಸ ವೇಷದಲ್ಲಿ ಪಾಶ್ಚಿಮಾತ್ಯ ರೀತಿಯ ಬಂಡವಾಳಶಾಹಿ ಪುನಃ ಪ್ರಪಂಚವನ್ನೇ ತನ್ನ ಪ್ರಭಾವದ ತೆಕ್ಕೆಯೊಳಗೆ ತೆಗೆದುಕೊಳ್ಳುತ್ತಿದೆ. ಏಶಿಯಾ ಮತ್ತು ಆಫ್ರಿಕಾದ ದೇಶಗಳು ತಮ್ಮ ಸ್ವಾತಂತ್ರ್ಯಕ್ಕಾಗಿ ಬಹಳಷ್ಟು ಹೋರಾಟ ಮಾಡಿದ್ದವು. ಈಗ ಅದೇ ದೇಶಗಳು ಬಂಡವಾಳಶಾಹಿ ಸಾಮ್ರಾಜ್ಯ ವಾದಕ್ಕೆ ಬಲಿಯಾಗುತ್ತಿವೆ. ಮುಂದುವರಿದ ಪಾಶ್ಚಿಮಾತ್ಯ ದೇಶಗಳು ಮಾರು ಕಟ್ಟೆಯ ಪ್ರಭಾವದ ಮೂಲಕ ತಮ್ಮ ಆರ್ಥಿಕ ಅಭಿವೃದ್ಧಿಯ ನೀತಿಯನ್ನು ಎಲ್ಲೆಲ್ಲೂ ಹೇರುತ್ತಿವೆ. ಇದರ ಪರಿಣಾಮವಾಗಿ ಆರ್ಥಿಕ ಮತ್ತು ಸಾಮಾಜಿಕ ಅಸಮತೋಲನ ಹೆಚ್ಚಾಗಿದೆ.

ಭಾರತದಲ್ಲಿ ದೇಶದ ಜನಸಂಖ್ಯೆಯ ಶೇಕಡಾ ಮೂವತ್ತರಷ್ಟು ಪ್ರಮಾಣ ದಲ್ಲಿ ಶ್ರೀಮಂತರು ಮತ್ತು ಮಧ್ಯಮ ವರ್ಗದ ಜನರು ಹುಟ್ಟಿಕೊಂಡಿದ್ದಾರೆ. ಅಂದರೆ ಮೂವತ್ತು ಕೋಟಿ ಜನರು ಮಾತ್ರ ಈ ಉನ್ನತ ಆರ್ಥಿಕ ಆದಾಯ ವನ್ನು ಹೊಂದಿದ್ದಾರೆ. ದೇಶದ ಹೊರಗೆ ಮತ್ತು ಒಳಗೆ ಕಾರ್ಯವೆಸಗುತ್ತಿರುವ ಮಾರುಕಟ್ಟೆಯ ಶಕ್ತಿಗಳು ಈ ಜನರನ್ನೇ ಗುರಿಯನ್ನಾಗಿಟ್ಟುಕೊಂಡು ಬಳಕೆ

ವಸ್ತುಗಳನ್ನೂ, ಐಶಾರಾಮಿ ವಸ್ತುಗಳನ್ನೂ ತಂದು-ತಂದು ಹಾಕುತ್ತಿವೆ. ಸರ್ಕಾರದ ಮುಕ್ತ ಆಮದು ನೀತಿಯಿಂದಾಗಿ ಅಸಂಖ್ಯಾತ ಬಳಕೆ ವಸ್ತುಗಳು ಭಾರತೀಯ ಮಾರುಕಟ್ಟೆಯನ್ನು ತುಂಬುತ್ತಿವೆ. ಇದರಿಂದಾಗಿ ಈ ವರ್ಗದ ಜನ ಹೆಚ್ಚು-ಹೆಚ್ಚಾಗಿ ಪದಾರ್ಥಗಳನ್ನು ಉಪಯೋಗಿಸುವಂತೆ ಪ್ರೋತ್ಸಾಹಿಸಲಾಗುತ್ತಿದೆ. ಇನ್ನು ಉಳಿದ ಶೇಕಡಾ ೭೦ರಷ್ಟು ಬಡ ಜನರು ತಮ್ಮ ಇರುವಿಕೆಗಾಗಿ ಹೋರಾಟ ನಡೆಸಬೇಕಾಗುತ್ತಿದೆ.

೧೯೯೭ರ ಮಾನವ ಅಭಿವೃದ್ಧಿ ವರದಿಯ ಪ್ರಕಾರ ಭಾರತದ ದೇಶದ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿ ಈ ಕೆಳಗೆ ಕಾಣಿಸಿದಂತಿದೆ.-

೧. ಭಾರತವು ೧೯೮೮ ಮತ್ತು ೧೯೯೨ರ ಮಧ್ಯದ ಅವಧಿಯಲ್ಲಿ ಶಸ್ತ್ರಾಸ್ತ್ರಗಳನ್ನು ಆಮದು ಮಾಡಿಕೊಳ್ಳುವಲ್ಲಿ ಪ್ರಥಮ ಸ್ಥಾನದಲ್ಲಿಯೂ ಮತ್ತು ತಲಾ ಆದಾಯದ ಪ್ರಮಾಣದಲ್ಲಿ ೧೪೭ ಸ್ಥಾನದಲ್ಲಿಯೂ ಇತ್ತು;
೨. ಭಾರತದ ಜನಸಂಖ್ಯೆಯಲ್ಲಿ ಶೇ. ೪೪ರಷ್ಟು ಜನರು ತೀವ್ರತಮವಾದ ಬಡತನದಲ್ಲಿದ್ದಾರೆ;
೩. ನಾಲ್ಕು ವರ್ಷಗಳ ಒಳಪಟ್ಟ ವಯಸ್ಸಿನ ಶೇ. ೫೭ ರಷ್ಟು ಮಕ್ಕಳು ಅಂದರೆ ೬ ಕೋಟಿ ಮಕ್ಕಳು ಕಡಿಮೆ ತೂಕ ಮತ್ತು ಅಪೌಷ್ಟಿಕತೆಗೆ ಒಳಗಾಗಿದ್ದಾರೆ;
೪. ಪ್ರಪಂಚದ ಬಡವರಲ್ಲಿ ಮೂರನೇ ಒಂದು ಭಾಗದಷ್ಟು ಜನರು ಭಾರತದಲ್ಲಿದ್ದಾರೆ.
೫. ಮಹಾನಗರಗಳಲ್ಲಿ ಅಲ್ಲಿಯ ಜನಸಂಖ್ಯೆಯ ಅರ್ಧದಷ್ಟು ಜನರು ಕೊಳಚೆ ಪ್ರದೇಶದಲ್ಲಿ ವಾಸವಾಗಿದ್ದಾರೆ;
೬. ಭಾರತದ ಮಕ್ಕಳಲ್ಲಿ ಮೂರನೇ ಒಂದು ಭಾಗದಷ್ಟು ಮಕ್ಕಳು ಬಾಲ ಕಾರ್ಮಿಕರಾಗಿ ಕೆಲಸಮಾಡಬೇಕಾಗಿದೆ;
೭. ಗರ್ಭಿಣಿ ಸ್ತ್ರೀಯರ ಸಂಖ್ಯೆಯಲ್ಲಿ ಶೇ. ೮೮ರಷ್ಟು ಸ್ತ್ರೀಯರು ಅನೀಮಿಯಾ ಮತ್ತು ಅಪೌಷ್ಟಿಕತೆಯಿಂದ ನರಳುತ್ತಾರೆ;
೮. ಮೂವತ್ತು ಕೋಟಿಯಷ್ಟು ಜನರು ಇನ್ನೂ ನಿರಕ್ಷರಸ್ಥರಾಗಿದ್ದಾರೆ;
೯. ಪ್ರತಿವರ್ಷ ಎರಡು ಕೋಟಿಗೂ ಹೆಚ್ಚು ಹಸುಗೂಸುಗಳು ಸಾಯುತ್ತವೆ;
೧೦. ಅರವತ್ತುನಾಲ್ಕು ಕೋಟಿ ಜನ ಶೌಚಾಲಯ, ಚರಂಡಿ, ನೀರುಮನೆ ಇತ್ಯಾದಿ ಪ್ರಾಥಮಿಕ ಸೌಕರ್ಯಗಳಿಂದಲೂ ವಂಚಿತರಾಗಿದ್ದಾರೆ;

ಸ್ವಾತಂತ್ರ್ಯದ ಐವತ್ತು ವರ್ಷಗಳ ಅನಂತರವೂ ಇದು ನಿಜವಾಗಿಯೂ ವ್ಯಥೆ ಹುಟ್ಟಿಸುವ ಚಿತ್ರವಾಗಿದೆ. ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ

ಹಿರಿಯ ಮುಖಂಡರು, ಮುಖ್ಯವಾಗಿ ರಾಷ್ಟ್ರಪಿತ ಮಹಾತ್ಮಾ ಗಾಂಧೀ ಕಲ್ಪಿಸಿ ಕೊಂಡಿದ್ದ ಸಮಾಜ ವ್ಯವಸ್ಥೆ ಇದಾಗಿರಲಿಲ್ಲ. ರಾಜಕಾರಣದ ಅಪರಾಧೀಕರಣ, ನೆಗೆನೆಗೆದು ಮುನ್ನುಗ್ಗುತ್ತಿರುವ ಭ್ರಷ್ಟಾಚಾರ, ಧರ್ಮಾಂಧತೆ ಮತ್ತು ಸ್ವಧರ್ಮದ ಬಗ್ಗೆ ಅತಿಯಾದ ಮೋಹ, ಎಲ್ಲೆಲ್ಲೂ ವ್ಯಾಪಿಸಿರುವ ನಿರುದ್ಯೋಗ, ಕೈಜಾರಿ ಹೋಗುತ್ತಿರುವ ಹಣದುಬ್ಬರ, ಅಗಾಧವಾದ ಸಾಮಾಜಿಕ ಮತ್ತು ಆರ್ಥಿಕ ವ್ಯತ್ಯಾಸ ಮುಂತಾದವುಗಳೆಲ್ಲ ನಾವು ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ಜೋಪಾನವಾಗಿ ಕಾಯ್ದಿಟ್ಟುಕೊಂಡಿದ್ದ ಮೌಲ್ಯಗಳಾಗಲೀ, ಆದರ್ಶಗಳಾಗಲೀ ಅಲ್ಲ. ಇಂಥ ಪರಿಸ್ಥಿತಿಯಲ್ಲಿ ದೇಶವನ್ನು ಉಳಿಸಿಕೊಂಡು ಬರಲು 'ಜನಶಕ್ತಿ' ಯನ್ನು ಕ್ರೋಢೀಕರಿಸುವುದು ಅಗತ್ಯವಾಗಿದೆ.

ಪ್ರಪಂಚದ ಎಲ್ಲ ಅಭಿವೃದ್ಧಿಶೀಲ ದೇಶಗಳು ವಿಶ್ವೀಕರಣ ಮತ್ತು ಉದಾರೀಕರಣದ ಬೇಟೆಗೆ ಬಲಿಪಶುವಾಗುತ್ತಿರುವಾಗ ಪಾಶ್ಚಿಮಾತ್ಯ ಬಂಡವಾಳಶಾಹಿ ಏಕಸ್ವಾಮ್ಯ ಮತ್ತು ಆರ್ಥಿಕ ಸಾಮ್ರಾಜ್ಯಶಾಹಿ ಇವುಗಳಿಂದ ಪ್ರಪಂಚವನ್ನು ಮುಕ್ತಗೊಳಿಸುವ ಉದ್ದೇಶ್ಯದಿಂದ "ಸ್ವಾತಂತ್ರ್ಯ ಮತ್ತು ನ್ಯಾಯಕ್ಕಾಗಿ ವಿಶ್ವ ನಾಗರೀಕರ ವೇದಿಕೆ" ಯನ್ನು ಸ್ಥಾಪಿಸುವ ಅಗತ್ಯವಿದೆ.

ಇತ್ತೀಚೆಗೆ ಒಂದು ಲೇಖನದಲ್ಲಿ ನೆಲಸನ್ ಮಂಡೇಲಾ ವಿಶ್ವೀಕರಣದ ಅಪಾಯದ ಬಗ್ಗೆ ಎಲ್ಲರ ಗಮನ ಸೆಳೆದಿದ್ದಾರೆ ಮತ್ತು ಸ್ವಾವಲಂಬನೆಯ ಅಗತ್ಯದ ಬಗ್ಗೆ ಒತ್ತಿಹೇಳಿದ್ದಾರೆ. ಅವರು ಆ ಲೇಖನದಲ್ಲಿ ಈ ರೀತಿ ಬರೆದಿದ್ದಾರೆ, "ಪ್ರಪಂಚದ ಬಹಳಷ್ಟು ಬಡತನಕ್ಕೆ ಮತ್ತು ಮುಖ್ಯವಾಗಿ ಆಫ್ರಿಕಾ ಖಂಡದಲ್ಲಿಯ ಬಡತನಕ್ಕೆ ಕಾರಣ ಸಿದ್ಧ ವಸ್ತುಗಳಿಗಾಗಿ ವಿದೇಶಿ ಮಾರುಕಟ್ಟೆಯ ಮೇಲಿನ ಅವಲಂಬನೆ ಮತ್ತು ಅದರಿಂದಾಗಿ ಆಯಾ ದೇಶಗಳಲ್ಲಿಯ ಉತ್ಪಾದನೆಗೆ ಆಗುವ ಧಕ್ಕೆ, ಕುಶಲತೆಗಳ ಮುರುಟುವಿಕೆ ಮತ್ತು ಅನಿಯಂತ್ರಿತ ಸಾಲದ ಹೊರೆ. ಗಾಂಧೀಜಿಯವರು ಪ್ರತಿಪಾದಿಸಿದ್ದ ಸ್ವಾವಲಂಬನೆಯ ವಿಚಾರ ಮೂಲಭೂತವಾದ ಆರ್ಥಿಕ ಸಿದ್ಧಾಂತವಾಗಿದೆ. ಆ ಸಿದ್ಧಾಂತವನ್ನು ಅನುಸರಿಸಿದೇಯಾದಲ್ಲಿ ತೃತೀಯ ಜಗತ್ತಿನಲ್ಲಿಯ ಬಡತನವನ್ನು ಕಡಿಮೆ ಮಾಡಬಹುದು ಮತ್ತು ಅಭಿವೃದ್ಧಿಯ ಪ್ರಕ್ರಿಯೆಯನ್ನು ಚುರುಕುಗೊಳಿಸಬಹುದು. ಈಗ ನಿರುದ್ಯೋಗಿಗಳನ್ನು ಸೃಷ್ಟಿಸುವ ಅರ್ಥಶಾಸ್ತ್ರವನ್ನು ಪೊಂದುತ್ತಿದ್ದೇವೆ. ಈ ಹೊಸ ಅರ್ಥವ್ಯವಸ್ಥೆಯಲ್ಲಿ ಕೆಲವೇ ಜನರು ಭೋಗಿಗಳಾಗಿ ಬಹುಸಂಖ್ಯಾತರು ಉಪವಾಸದಿಂದ ಬಳಲುತ್ತಿರುವಾಗ ನಾವು ಈಗಿನ ವಿಶ್ವೀಕರಣವನ್ನು ಕುರಿತು ಪುನರಾಲೋಚನೆ ಮಾಡಬೇಕಾಗುತ್ತದೆ ಮತ್ತು ಗಾಂಧೀ

ಪುಟ ೨೮ ನೋಡಿ

ವ್ಯರ್ಥವಾಗಿ ಸಮುದ್ರ ಸೇರುತ್ತಿರುವ ನೀರಿನ ಉಪಯೋಗ ಹೇಗೆ

–ಪಿ. ಎಂ. ನಟರಾಜನ್

ಭೂಮಿ, ನೀರು, ಜನ ಮತ್ತು ಬಿಸಿಲು ಇವೇ ಭಾರತದ ನಿಜವಾದ ಸಿರಿ ಸಂಪತ್ತಿಕೆ. ಪ್ರಪಂಚದಲ್ಲಿಯೇ ಭಾರತ ಅತ್ಯಂತ ಹೆಚ್ಚು ತೇವವುಳ್ಳ ದೇಶ, ಈ ದೇಶದ ವಾರ್ಷಿಕ ಸರಾಸರಿ ಮಳೆಯ ಪ್ರಮಾಣ ೧,೧೭೦ ಮಿಲಿ ಮೀಟರ್, (ಚಿರಾಪುಂಜಿ ೨೦೦೦ ಮಿಲಿ ಮೀಟರಿಗೂ ಮಿಕ್ಕಿ ಪಡೆಯುತ್ತದೆ.) ಈ ಮಳೆಯು ವರ್ಷದ ತೀವ್ರತಮವಾದ ಮಳೆ ಅವಧಿಯ ೧೦೦ ಘಂಟೆಗಳ ೧೦೦ ಮಳೆಗಾಲದ ದಿನಗಳಲ್ಲಿ ಬೀಳುತ್ತದೆ. ವಾರ್ಷಿಕ ನೀರಿನ ಹರಿವು ೪೦೦೦ ಬಿಲಿಯನ್ ಘನ ಮೀಟರ್. ಭಾರತದಲ್ಲಿ ಭೂಮಿಯ ಮೇಲ್ಭಾಗದ ವಾರ್ಷಿಕ ಸರಾಸರಿ ಹರಿವು ೧೮೬೯ ಬಿಲಿಯನ್ ಘನ ಮೀಟರ್. ಕೇಂದ್ರ ಭೂಜಲ ಮಂಡಳಿಯ ಪ್ರಕಾರ ಉಪಯೋಗಕ್ಕೆ ಬರಬಹುದಾದ ಭೂಜಲದ ಪ್ರಮಾಣ ೪೩೨ ಬಿಲಿಯನ್ ಘನ ಮೀಟರ್. ಆದ್ದರಿಂದ ಒಟ್ಟು ನೀರಿನ ಪ್ರಾಪ್ತಿ ೨,೩೦೦ ಬಿಲಿಯನ್ ಘನ ಮೀಟರ್. ನೀರಿನ ಸಂಪನ್ಮೂಲದಲ್ಲಿಯ ಹಂಚಿಕೆಯಲ್ಲಿರುವ ಅಸಮಾನತೆ ಮತ್ತು ಭೂಮಿಯ ಮೇಲ್ಮೈ ಲಕ್ಷಣ ಇತ್ಯಾದಿಗಳನ್ನು ಗಣನೆಗೆ ತೆಗೆದುಕೊಂಡರೆ ಸರಾಸರಿ ವಾರ್ಷಿಕ ಉಪಯೋಗಕರ ನೀರಿನ ಪ್ರಮಾಣ ೧,೧೨೨ ಬಿಲಿಯನ್ ಘನ ಮೀಟರ್. ಇದರಲ್ಲಿ ಮೇಲ್ಭಾಗದ ನೀರಿನ ಪ್ರಮಾಣ ೬೯೦ ಬಿಲಿಯನ್ ಘನ ಮೀಟರ್ ಮತ್ತು ಭೂಜಲ ನೀರಿನ ಪ್ರಮಾಣ ೪೩೨ ಬಿ. ಘ. ಮೀ. ೧೯೯೮ ರಲ್ಲಿ ಇದ್ದ ಪರಿಸ್ಥಿತಿಯ ಪ್ರಕಾರ ಇದರಲ್ಲಿ ೬೦೬ ಬಿ.ಘ.ಮೀ. ನೀರನ್ನು ಮಾತ್ರ ಉಪಯೋಗಿಸಿಕೊಳ್ಳಲಾಗಿದೆ. ಇದರಲ್ಲಿ ನೀರಾವರಿಗಾಗಿ ೫೦೧, ಗೃಹಬಳಕೆಗಾಗಿ ೩೦, ಕೈಗಾರಿಕೆಗಾಗಿ ೨೦ ವಿದ್ಯುತ್‌ಶಕ್ತಿಗಾಗಿ ೨೦ ಮತ್ತು ಇತರೆ ಕೆಲಸಕ್ಕಾಗಿ ೨೪ ಬಿಲಿಯನ್ ಘನ ಮೀಟರ್ ನೀರನ್ನು ಉಪಯೋಗಿಸಲಾಯಿತು. ೨೦೫೦ ನೇ ಇಸ್ವಿ ವೇಳೆಗೆ ಬೇಕಾಗಿರುವ ನೀರಿನ ಪ್ರಮಾಣ ೯೭೩ ಬಿ.ಘ.ಮೀ. ಆ ಸಮಯದಲ್ಲಿಯೂ ೧೪೯ ಬಿ. ಘ. ಮೀ. ನೀರು ಬಾಕಿ ಉಳಿದಿರುತ್ತದೆ.

೧೯೫೫ ರಲ್ಲಿ ನೀರಿನ ತಲಾ ದೊರಕುವಿಕೆ ೫,೩೦೦ ಘ. ಮೀ. ಇದ್ದುದು ೧೯೯೮ ರ ಹೊತ್ತಿಗೆ ೨,೨೦೦ ಘ.ಮೀ. ಗೆ ಇಳಿಯಿತು. ಇನ್ನು ೨೦೨೫ ನೇ ಇಸ್ವಿ ವೇಳೆಗೆ ಅಂದಿನ ಜನಸಂಖ್ಯಾ ಬೆಳವಣಿಗೆಯನ್ನು ಗಮನದಲ್ಲಿರಿಸಿಕೊಂಡರೆ ಲಭ್ಯವಾಗುವ ನೀರಿನ ರಾಷ್ಟ್ರೀಯ ಸರಾಸರಿ ಪ್ರಮಾಣ ಕೇವಲ ೧೫೦೦ ಘ.ಮೀ.

ಈ ಪ್ರಮಾಣ ಕೆಲವು ಪ್ರದೇಶಗಳಲ್ಲಿ ಅಥವಾ ತಗ್ಗುಗಳಲ್ಲಿ ಇನ್ನೂ ಕಡಿಮೆ ಇರುತ್ತದೆ. ಆದಾಗ್ಯೂ ಆ ಕಾಲದಲ್ಲಿ ಭಾರತ ನೀರಿನ ಅಭಾವ ವನ್ನು ಹೊಂದಿರುವುದಿಲ್ಲ. ಏಕೆಂದರೆ ವಿಶ್ವ ಜಲಸಂಪನ್ಮೂಲ ಅಳತೆಯ ಪ್ರಕಾರ ೧೦೦೦ ಘನ ಮೀಟರ್‌ಗೂ ಕಡಿಮೆ ನೀರು ಲಭ್ಯ ಇದ್ದರೆ ಮಾತ್ರ ಆ ದೇಶವು ನೀರಿನ ಅಭಾವ ಹೊಂದಿದೆ ಎಂದು ಪರಿಗಣಿಸಲಾಗುತ್ತದೆ.

೧೯೮೮ ರ **"ಐದು ದಶಕಗಳ ಜಲ ಸಂಪನ್ಮೂಲ ಅಭಿವೃದ್ಧಿ ಅಧ್ಯಯನ"** ಪ್ರಕಾರ ದೇಶದ ಎಲ್ಲ ನದಿಗಳ ಸಮಪಾತಳಿಯಲ್ಲಿ ದೊರೆಯಬಹುದಾದ ನೀರಿನ ಪ್ರಮಾಣ ೧,೮೬೯ ಬಿಲಿಯನ್ ಘನಮೀಟರ್ (೬೬,೦೦೩ ಟಿಎಂಸಿ ಅಡಿ) ಮತ್ತು ಉಪಯೋಗಿಸಬಹುದಾದ ನೀರಿನ ಹರಿವು ಅಂತರ್‌ಜಲವನ್ನು ಬಿಟ್ಟು ೬೯೦ ಬಿ. ಘ.ಮೀಟರ್ (೨೪,೩೬೭ ಟಿಎಂಸಿ ಅಡಿ). ಆದ್ದರಿಂದ ಉಪಯೋಗಿ ಸದೇ ಇರುವ ನೀರಿನ ಪ್ರಮಾಣ ಅಥವಾ ಸಮುದ್ರಕ್ಕೆ ವ್ಯರ್ಥವಾಗಿ ಹೋಗಿ ಸೇರುವ ನೀರಿನ ಪ್ರಮಾಣ ವಾರ್ಷಿಕವಾಗಿ ೧,೧೭೯ ಬಿಲಿಯನ್ ಘನ ಮೀಟರ್. (೪೧,೬೩೭ ಟಿಎಂಸಿ ಅಡಿ.)

ಇದೇ ಅಧ್ಯಯನದ ಪ್ರಕಾರ ದಕ್ಷಿಣದ ಪ್ರಸ್ಥಭೂಮಿಯಲ್ಲಿಯ ನದಿಗಳ ಸರಾಸರಿ ವಾರ್ಷಿಕ ಲಭ್ಯತೆ ೩೦೧.೭೮ ಬಿಲಿಯನ್ ಘನ ಮೀಟರ್ (೧೭,೬೨೦ ಟಿಎಂಸಿ ಅಡಿ) ಮತ್ತು ಅಂತರ್‌ಜಲವನ್ನು ಬಿಟ್ಟು ಉಪಯೋಗಕ್ಕೆ ಬರುವ ನೀರಿನ ಹರಿವು ೨೫೭.೨ ಬಿ.ಘ.ಮೀ. ಅಥವಾ ೯,೦೮೩ ಟಿಎಂಸಿ. ದಕ್ಷಿಣ ಪ್ರಸ್ಥ ಭೂಮಿಯ ನೀರಿನ ಜಾಲದ ವ್ಯಾಪ್ತಿ ಪಶ್ಚಿಮದಲ್ಲಿ ತಾಪಿ ನದಿಯಿಂದ ಕನ್ಯಾಕುಮಾರಿಯ ವರೆಗೆ ಮತ್ತು ಪೂರ್ವದಲ್ಲಿ ಮಹಾನದಿಯಿಂದ ಕನ್ಯಾಕುಮಾರಿಯವರೆಗೆ ಇದೆ. ಆದ್ದರಿಂದ ಉಪಯೋಗಕ್ಕೆ ಬಾರದ ಅಥವಾ ವ್ಯರ್ಥವಾಗಿ ಸಮುದ್ರಕ್ಕೆ ಸೇರುವ ನೀರಿನ ಪ್ರಮಾಣ ೨೪೪,೫೮ ಬಿ.ಘ.ಮೀ. (೮,೬೩೭ ಟಿಎಂಸಿ ಅಡಿ).

ಫಲವತ್ತಾದ ಭೂಮಿ ಇರುವಲ್ಲಿ ನೀರಿನ ವ್ಯವಸ್ಥಾಪನೆ ಮತ್ತು ಉಳಿತಾಯದ ತಂತ್ರಗಳಿಂದಾಗಿ ಹರಿಯುತ್ತಿರುವ ಒಂದು ಟಿಎಂಎಫ್ ನೀರಿನಿಂದ ೪೦೦೦ ಹೆಕ್ಟೇರ್‌ಭೂಮಿಯಲ್ಲಿ ನೀರಾವರಿ ವ್ಯವಸಾಯ ಮಾಡಬಹುದು. ಅದರಿಂದಾಗಿ ಪ್ರತಿ ಹೆಕ್ಟೇರ್ ಜಮೀನಿನಿಂದ ಐದುವರೆ ಟನ್ ಆಹಾರ ಧಾನ್ಯ ಬೆಳೆಯಬಹುದು ಮತ್ತು ಇದರ ಬೆಲೆ ಸುಮಾರು ೫.೫೦೦ ರೂಪಾಯಿಗಳು. ತಮಿಳುನಾಡಿನಲ್ಲಿ ೨೦೦೦ ನೇ ಇಸ್ವಿಯಲ್ಲಿ ಒಂದು ಹೆಕ್ಟೇರ್‌ಗೆ ಗರಿಷ್ಟ ಇಳುವರಿ ೧೦ ಟನ್‌ಗಳಷ್ಟಿತ್ತು ಮತ್ತು ಸರಾಸರಿ ಇಳುವರಿ ಐದುವರೆ ಟನ್. ಮುಂದೆ ಭವಿಷ್ಯದಲ್ಲಿ ಏಳುವರೆ ಟನ್ ಬೆಳೆಯುವ ಯೋಜನೆ ಹಾಕಿಕೊಳ್ಳಲಾಗಿದ್ದು ಸಾಮಾನ್ಯ ಮಣ್ಣು ಇರುವಲ್ಲಿ ಮತ್ತು

ನೀರಿನ ವ್ಯವಸ್ಥಾಪನೆ ಹಾಗೂ ನೀರಿನ ಉಳಿತಾಯದ ತಂತ್ರಜ್ಞಾನ ಹೆಚ್ಚು ಪರಿಚಿತ ಇಲ್ಲದೇ ಇರುವಲ್ಲಿ ಒಂದು ಟಿಎಂಎಫ್ ಅಡಿ ನೀರಿನಿಂದ ೨೦೦೦ ಹೆಕ್ಟೇರ್ ಭೂಮಿಯಲ್ಲಿ ನೀರಾವರಿ ವ್ಯವಸಾಯ ಮಾಡಬಹುದು.

ಮೇಲ್ಕಾಣಿಸಿದ ಎರಡು ನಿಖರ ಅಳತೆಗೋಲುಗಳನ್ನು ಆಧಾರವಾಗಿಟ್ಟುಕೊಂಡ ದಕ್ಷಿಣ ಪ್ರಸ್ಥಭೂಮಿ ಹಾಗೂ ಮೇಲ್ಭಾಗದ ನೀರನ್ನು ಇನ್ನೂ ಉಪಯೋಗಿಸದೆ ಉಳಿದಿರುವ ದೇಶದ ಇತರೆಡೆಯ ಭೂಮಿ ಇವೆರಡಕ್ಕೂ ಸಂಬಂಧಿಸಿದಂತೆ ಅಲ್ಲಿ ನೀರಾವರಿ ಆದ ಪ್ರದೇಶ, ಭತ್ತ ಬೆಳೆಯುವ ಪ್ರಮಾಣ, ಅದರ ಉತ್ಪಾದನೆಯ ಬೆಲೆ, ದಿನಗೂಲಿ ಸಿಗುವ ದಿನಗಳು, ಖರ್ಚು–ವೆಚ್ಚದ ಅನುಪಾತ ಮುಂತಾವುಗಳ ಲೆಕ್ಕವನ್ನು ತಯಾರಿಸಲಾಗಿದೆ.

ಭಾರತದಲ್ಲಿ ಈಗ ಉಪಯೋಗಿಸಲ್ಪಡದೇ ಇರುವ ೪೧,೬೩೬ ಟಿ.ಎಂ.ಸಿ. ಪೈಕಿ ಕೇವಲ ೩೭,೦೦೦ ಟಿಎಂಸಿ ಅಡಿ ನೀರನ್ನು ನೀರಾವರಿಗೂ ಮತ್ತು ಬಾಕಿ ಉಳಿಯುವ ೪,೬೩೬ ಟಿಎಂಸಿ ಅಡಿ ನೀರನ್ನು ಕುಡಿಯುವ ಹಾಗೂ ಇತರ ಉದ್ದೇಶ್ಯಗಳಿಗಾಗಿಯೆಂದೂ ಯೋಚಿಸಲಾಗಿದೆ. ಈ ನೀರಿನಿಂದ ೭೪ ದಶಲಕ್ಷ ಹೆಕ್ಟೇರ್‌ನಿಂದ ೧೪೮ ದಶಲಕ್ಷ ಹೆಕ್ಟೇರ ವರೆಗೆ ನೀರಾವರಿ ಮಾಡಿ ಪ್ರತಿವರ್ಷ ೧೪೮ ದಶಲಕ್ಷದಿಂದ ೮೧೪ ದಶಲಕ್ಷ ಟನ್‌ಗಳವರೆಗೆ ಭತ್ತ ಬೆಳೆಯುವುದು ಸಾಧ್ಯ. ಫಲವತ್ತಾದ ಭೂಮಿಯಲ್ಲಿ ೪.೫ ಲಕ್ಷ ಕೋಟಿ ರೂಪಾಯಿಗಳಷ್ಟು ಬೆಲೆ ಬಾಳುವ ಮತ್ತು ಇನ್ನು ಸಾಮಾನ್ಯವಾದ ಭೂಮಿಯಲ್ಲಿ ೮೧,೪೦೦ ಲಕ್ಷ ಕೋಟಿ ರೂ. ಗಳಷ್ಟು ಬೆಲೆ ಬಾಳುವ ಭತ್ತವನ್ನು ಪ್ರತಿವರ್ಷ ಬೆಳೆಯಬಹುದು.

ಆದ್ದರಿಂದ ದಕ್ಷಿಣ ಪ್ರಸ್ಥಭೂಮಿಯಲ್ಲಿ ಪ್ರತಿವರ್ಷ ೧೬,೫೦೦ ಕೋಟಿಯಿಂದ ೯೦,೭೫೦ ಕೋಟಿ ರೂಪಾಯಿ ಬೆಲೆ ಆಹಾರಧಾನ್ಯ ಬೆಳೆಯಬಹುದಾದಷ್ಟು ಪ್ರಮಾಣದ ನೀರನ್ನು ಸಮುದ್ರಕ್ಕೆ ಬಿಡುವುದರ ಮೂಲಕ ವ್ಯರ್ಥ ಮಾಡುತ್ತಿದ್ದೇವೆ. ಇದೇ ರೀತಿ ಇಡೀ ಭಾರತದ ಲೆಕ್ಕ ತೆಗೆದುಕೊಂಡರೆ ೮೧,೪೦೦ ಕೋಟಿಯಿಂದ ೪.೫ ಲಕ್ಷ ಕೋಟಿ ಬೆಲೆ ಆಹಾರಧಾನ್ಯ ಬೆಳೆಯಬಹುದಾದಷ್ಟು ಪ್ರಮಾಣದ ನೀರನ್ನು ಸಮುದ್ರಕ್ಕೆ ಕಳುಹಿಸಿ ನಷ್ಟ ಮಾಡಿಕೊಳ್ಳುತ್ತಿದ್ದೇವೆ.

ನಾವು ಒಂದು ಟಿ.ಎಂ.ಸಿ. ಅಡಿ ನೀರನ್ನು ಸಮುದ್ರಕ್ಕೆ ವ್ಯರ್ಥವಾಗಿ ಕಳುಹಿಸಿದರೆ ಫಲವತ್ತಾದ ಭೂಮಿಯಲ್ಲಿ ೧೨.೧ ಕೋಟಿ ರೂಪಾಯಿ ಮತ್ತು ಸಾಮಾನ್ಯ ಭೂಮಿಯಲ್ಲಿ ೨.೨ ಕೋಟಿ ರೂಪಾಯಿಗಳಷ್ಟು ಬೆಲೆ ಬಾಳುವ ಆಹಾರ ಧಾನ್ಯ ಪದಾರ್ಥಗಳನ್ನು ಪ್ರತಿವರ್ಷ ಕಳೆದುಕೊಂಡಂತೆ. ನಾವು ಸ್ವಾತಂತ್ರ್ಯ ಬಂದಾಗಿನಿಂದಲೂ ಕಳೆದ ೫೩ ವರ್ಷಗಳಿಂದ ಜೀವನ ಉಳಿಸುವ ಇಂಥ ಬಹು ಅಮೂಲ್ಯ

ವಾದ ಪದಾರ್ಥವನ್ನು ಮತ್ತು ಅನೇಕ ಸಾವಿರ ಕೋಟಿ ರೂಪಾಯಿಗಳನ್ನು ಸಮು ದ್ರಕ್ಕೆ ನೀರನ್ನು ವ್ಯರ್ಥವಾಗಿ ಸೇರಿಸುವುದಕ್ಕೆ ಅವಕಾಶ ಮಾಡಿರುವ ಕಾರಣ ದಿಂದ ಕಳೆದುಕೊಳ್ಳುತ್ತಿದ್ದೇವೆ.

ಮೇಲ್ಭಾಗದ ನೀರಿನಿಂದ ಆಗುವ ನೀರಾವರಿ ಮೂಲಕ ಭತ್ತವನ್ನು ಬೆಳೆಯು ವುದು ಸುಲಭ. ಆದರೆ ಇನ್ನೂ ಹೆಚ್ಚಿನ ಲಾಭ ಪಡೆಯಲು ಮತ್ತು ಆದಾಯ ವನ್ನು ಹೆಚ್ಚಿಸಿಕೊಳ್ಳಲು ಮಿಶ್ರಬೆಳೆ ವ್ಯವಸಾಯ ಮಾಡುವುದು ಉತ್ತಮ. ಭತ್ತದ ವ್ಯವಸಾಯದೊಂದಿಗೆ ಇನ್ನು ಇತರ ಯಾವುದೇ ಖುಷ್ಕಿ ಬೆಳೆ ಯನ್ನು ತೇವಾಂಶದಲ್ಲಿ ಬೆಳೆದುದಾದರೆ ಪ್ರತಿ ಹೆಕ್ಟೇರ್‌ಗೆ ಭತ್ತದ ಆದಾಯ ವಲ್ಲದೆ ೧೦,೦೦೦ ರೂಪಾಯಿಗಳನ್ನು ಹೆಚ್ಚುವರಿ ಪಡೆಯಬಹುದು. ಹೀಗೆ ಭಾರತದ ಫಲವತ್ತಾದ ಭೂಮಿಯಿಂದ ಪ್ರತಿ ವರ್ಷ ಒಟ್ಟು ೬ ಲಕ್ಷ ಕೋಟಿ ರೂಪಾಯಿ ಮತ್ತು ಸಾಮಾನ್ಯ ಭೂಮಿಯಿಂತೆ ೧.೬ ಲಕ್ಷ ಕೋಟಿ ರೂಪಾಯಿ ಆದಾಯ ಪಡೆಯಬಹುದು.

೧೯೬೬ ರಲ್ಲಿದ್ದ ಬೆಲೆಗಳ ಆಧಾರದ ಮೇಲೆ ತಯಾರಿಸಲಾದ ಅಂದಾಜಿನ ಮೇರೆಗೆ ಗಂಗಾ-ಕಾವೇರಿ ನದಿಗಳನ್ನು ಜೋಡಿಸಲು ಮತ್ತು ಮಹಾನದಿ ಗೋದಾವರಿಗಳನ್ನು ಜೋಡಿಸಲು ಅನುಕ್ರಮವಾಗಿ ಎರಡು ಲಕ್ಷ ಕೋಟಿ ಮತ್ತು ೫೦,೦೦೦ ಕೋಟಿ ರೂಪಾಯಿಗಳು ಖರ್ಚಾಗುವವು. ಈ ಬೃಹತ್ ಖರ್ಚಿನಿಂದ ದೊರೆಯಬಹುದಾದ ಲಾಭಗಳಲ್ಲಿ ಮಳೆ ಆಧಾರಿತ ಬೆಳೆಗಳಿಂದ ಬರುವ ಆಧಾಯವನ್ನೂ ಸೇರಿಸಲಾಗಿದೆ. ಅಲ್ಲದೆ, ಖಚಿತವಾದ ನೀರಿನ ಸರಬ ರಾಜಿನ ಕಾರಣದಿಂದ ಭತ್ತ, ಬಾಳೆ, ಕಬ್ಬು ಮುಂತಾದ ತರಿ ಬೆಳೆಗಳನ್ನು ಬೆಳೆಯು ವುದರ ಜೊತೆಗೆ ತೋಟಗಾರಿಕೆ ಬೆಳೆಗಳನ್ನೂ, ಹೂ ಬೆಳೆಗಳನ್ನೂ ಹವಾಮಾನ ಮತ್ತು ಮಾರುಕಟ್ಟೆಯನ್ನು ನೋಡಿ ಬೆಳೆಯಬಹುದಾಗಿದೆ. ಆದ್ದರಿಂದ ನಿರೀಕ್ಷಿ ಸಿರುವ ಒಟ್ಟಾರೆ ಲಾಭಕ್ಕಿಂತಲೂ ಬಹಳ ಹೆಚ್ಚು ಲಾಭಗಳು ದೊರೆಯುತ್ತವೆ. ಆದ್ದರಿಂದಲೇ ಸರ್ ಆರ್ಥರ್ ಕಾಟನ್ "ಅಗಣಿತ ಲಾಭಗಳು" ಎಂದು ಬಣ್ಣಿಸಿದ್ದು. ಇಂದಿನ ಬೆಲೆಗಳಾಧಾರಿತ ಖರ್ಚು-ಲಾಭಗಳ ಅನುಪಾತ ಅನುಕೂಲವಾಗಿಯೇ ಇದೆ.

ಒಂದು ಹೆಕ್ಟೇರ್ ಪ್ರದೇಶಕ್ಕೆ ೫೦ ಜನ ಕೃಷಿ ಕಾರ್ಮಿಕರು ಬೇಕಾಗು ತ್ತದೆ ಎಂಬ ಲೆಕ್ಕದಲ್ಲಿ ಈ ಯೋಜನೆಯ ಕಾರಣ ಪ್ರತಿವರ್ಷ ೩,೭೦೦ ದಶಲಕ್ಷ ದಿಂದ ೭,೪೦೦ ದಶಲಕ್ಷ ಕಾರ್ಮಿಕ ದಿನಗಳ ಸೃಷ್ಟಿಯಾಗುತ್ತದೆ. ಅಲ್ಲದೆ ಪರೋಕ್ಷ ವಾಗಿ ಸಂಭವಿಸುವ ಉದ್ಯೋಗದ ಅವಕಾಶಗಳ ಕಾರಣದಿಂದ ಒಟ್ಟಾರೆ ಉದ್ಯೋಗಗಳ ಸೃಷ್ಟಿ ಗಣನೀಯವಾಗಿ ಹೆಚ್ಚಾಗುವುದು. ಈ ಹೊಸ ನೀರಾವರಿ

ಯೋಜನೆಯಿಂದಾಗಿ ಕೃಷಿ ಕಾರ್ಮಿಕರು ಮತ್ತು ಶಿಕ್ಷಿತ ನಿರುದ್ಯೋಗಿಗಳು ತಮ್ಮ ಬದುಕಿನ ಭದ್ರತೆ ಪಡೆಯಬಹುದು. ಕೃಷಿ ಉದ್ಯಮವಲ್ಲದೆ ಇನ್ನು ಬೇರೆ ಯಾವ ಉದ್ಯೋಗವೂ ಅಷ್ಟೊಂದು ದೊಡ್ಡ ಸಂಖ್ಯೆಯ ಜನಸ್ತೋಮಕ್ಕೆ ಬದುಕಿನ ಭದ್ರತೆ ಕೊಡಲಾರದು.

ಭಾರತದಲ್ಲಿ ನೀರಿನ ಸಂಪನ್ಮೂಲಗಳ ಶಾಶ್ವತ ಅಭಿವೃದ್ಧಿಯನ್ನು ಸಾಧಿಸಲು ಅನೇಕ ತಂತ್ರಗಳೇನೋ ಇವೆ. ಆದರೆ ಒಂದು ಜಲ ಸಮೃದ್ಧಿ ಪ್ರದೇಶದಿಂದ ಇನ್ನೊಂದು ಜಲ ಸಮೃದ್ಧಿ ಪ್ರದೇಶಕ್ಕೆ ಸಂಪರ್ಕ ಜಾಲ ನಿರ್ಮಾಣ ಮಾಡದಿದ್ದಲ್ಲಿ ಇಂದಿನ ಜಲ ಸಂಪನ್ಮೂಲಗಳನ್ನು ಕೇವಲ ಶೇ. ೫ ರಿಂದ ೧೦ ಕ್ಕೆ ಮಾತ್ರ ಏರಿಸಬಹುದು ಮತ್ತು ಇಷ್ಟನ್ನೇ ಅನುಷ್ಠಾನಕ್ಕೆ ತರಲು ಅನೇಕ ದಶಕಗಳೇ ಬೇಕಾಗುವುದು ಮತ್ತು ಕೋಟ್ಯಂತರ ರೂಪಾಯಿಗಳೂ ಬೇಕಾಗುವುದು. ಆದ್ದರಿಂದ ಒಂದು ಜಲಸಮೃದ್ಧಿ ಪ್ರದೇಶದಿಂದ ಇನ್ನೊಂದು ಜಲಸಮೃದ್ಧಿ ಪ್ರದೇಶಕ್ಕೆ ನೀರಿನ ಸಾಗಾಣಿಕೆಯ ನೀರಿನ ವ್ಯವಸ್ಥೆ ಇಲ್ಲದೆ ಹೋದಲ್ಲಿ ದೇಶದ ಎಲ್ಲ ನೀರಿನ ಬೇಡಿಕೆ ಪ್ರದೇಶಗಳಿಗೆ ಶಾಶ್ವತವಾಗಿ ಸ್ವಾವಲಂಬನೆಯನ್ನು ಸಾಧಿಸಿ ಕೊಡಲು ಸಾಧ್ಯವಾಗುವುದಿಲ್ಲ. ಅಲ್ಲದೆ ಕ್ರಿ.ಪೂ. ೨೦೫೦ ನೇ ಇಸ್ವಿ ವೇಳೆಗೆ ಇರುವ ಭಾರತದ ೧.೬೪ ಬಿಲಿಯನ್ ಜನಸಂಖ್ಯೆಗೆ ಅಗತ್ಯವಾದ ೪೫೦ ದಶಲಕ್ಷ ಟನ್ ಆಹಾರಧಾನ್ಯ ಬೆಳೆಯಲು ಮತ್ತು ಪ್ರವಾಹ ಹಾಗೂ ಬರಗಾಲವನ್ನು ತಪ್ಪಿಸಲು ಹೆಚ್ಚು ನೀರು ಹೊಂದಿರುವ ನದಿಗಳನ್ನು ಕಡಿಮೆ ನೀರು ಇರುವ ನದಿಗಳ ಅಥವಾ ಪ್ರದೇಶಗಳ ಜೊತೆಗೆ ಸಂಪರ್ಕವೇರ್ಪಡಿಸುವುದು ಅಗತ್ಯ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಆಹಾರಧಾನ್ಯಗಳಿಗಾಗಿ ಕೊಟ್ಟ ಸಬ್ಸಿಡಿಯ ಮೊತ್ತ ೧೯೯೪-೯೫ ರಲ್ಲಿ ೧,೩೭೨ ಬಿಲಿಯನ್ ರೂಪಾಯಿಗಳಷ್ಟಿತ್ತು. ಇದರಲ್ಲಿ ರಾಜ್ಯ ಸರ್ಕಾರಗಳ ಮೊತ್ತ ೯೪೨ ಬಿಲಿಯನ್ ರೂಪಾಯಿಗಳು. ಇದರಲ್ಲಿ ಶೇಕಡಾ ೧೦ ರಷ್ಟು ರಿಯಾಯ್ತಿಯನ್ನು ಕಡಿತಗೊಳಿಸಿದಲ್ಲಿ ೧೩೭ ಬಿಲಿಯನ್ ರೂಪಾಯಿಗಳ ಉಳಿತಾಯವಾಗುವುದು. ಇಷ್ಟು ಹಣ ೪-೫ ವರ್ಷಗಳಲ್ಲಿ ಮಹಾನದಿ-ಗೋದಾವರಿ-ಕಾವೇರಿಯನ್ನು ಜೋಡಿಸುವುದಕ್ಕೆ ಸಾಕಾಗುವುದು. ಇಂಥ ಯೋಜನೆಯಿಂದ ದೊರೆಯುವ ದೀರ್ಘಕಾಲೀನ ಲಾಭಗಳನ್ನು ಗಮನಿಸಿದರೆ ವಿಶ್ವ ಬ್ಯಾಂಕ್ ಮತ್ತು ಇತರ ದೇಶಗಳಿಂದ ಸಾಲ ಪಡೆಯುವುದು ತಪ್ಪಾಗುವುದಿಲ್ಲ.

ಮುಂದೆ ಏನಾದರೂ ಮೂರನೇ ವಿಶ್ವ ಮಹಾಯುದ್ಧ ನಡೆದಲ್ಲಿ ಅದು ನೀರಿನ ಹಂಚಿಕೆಗಾಗಿಯೇ ಎಂದು ಭವಿಷ್ಯ ನುಡಿಯಲಾಗುತ್ತಿದೆ. ಸಮುದ್ರಕ್ಕೆ ನೀರು ವ್ಯರ್ಥವಾಗಿ ಸೇರುತ್ತಿರುವುದರಿಂದ ಯಾವ ದೇಶದಲ್ಲಿ ಬುದ್ಧ, ಗಾಂಧಿ ಮತ್ತು

ಅನೇಕ ಮಹಾತ್ಮರು ಇದ್ದರೋ ಮತ್ತು ಇಂದಿಗೂ ಇರುವರೋ ಅಂಥ ದೇಶವು ಕೇವಲ ನೀರಿನ ಹಂಚಿಕೆಯಂಥ ಸಾಮಾನ್ಯ ಸಂಗತಿಗಾಗಿ ಒಡೆದು ಚೂರಾಗ ಬಾರದು. ಆದ್ದರಿಂದ ಕೇಂದ್ರೀಯ, ಶಾಸಕೀಯ ಮತ್ತು ರಾಜಕೀಯ ಮಧ್ಯಸ್ಥಿಕೆಯಿಂದಲೂ ಮತ್ತು ಜನರ ಪಾಲ್ಗೊಳ್ಳುವಿಕೆಯಿಂದಲೂ ಜನಸಂಪನ್ಮೂಲ ಪ್ರದೇಶಗಳನ್ನು ಜೋಡಿಸುವುದರ ಮೂಲಕ ನಮ್ಮ ದೇಶವನ್ನು ಒಂದಾಗಿ ಇಡೋಣ.★ ('ದಿ ಹಿಂದೂ' ಸಾಭಾರ ಅನು : ಸು. ಕೌ.)

೨೨ ನೇ ಪುಟದಿಂದ

ವಿಚಾರ ಪ್ರಣೀತ ಪರ್ಯಾಯ ವ್ಯವಸ್ಥೆಯನ್ನು ಆಲೋಚಿಸಬೇಕಾಗುತ್ತದೆ."

ವಿಪತ್ಕಾರಿಯಾದ ವಿಶ್ವೀಕರಣವನ್ನು ವಿರೋಧಿಸುವ ಒಂದು ಜಗದ್ವ್ಯಾಪಿ ಆಂದೋಲನವನ್ನು ಪ್ರಾರಂಭಿಸುವುದು ಅತ್ಯಂತ ಶೀಘ್ರ ಅಗತ್ಯವಾಗಿದೆ. ಮಹಾತ್ಮಾ ಗಾಂಧೀಜಿಯವರ ಕರೆಗೆ ಓಗೊಟ್ಟು ಯುವಕರು ಸ್ವಾತಂತ್ರ್ಯ ಚಳುವಳಿಯಲ್ಲಿ ಶೌರ್ಯಯುತ ಹೋರಾಟವನ್ನು ನಡೆಸಿದರೆಂಬುದನ್ನು ನಾವು ಇಲ್ಲಿ ಜ್ಞಾಪಿಸಿಕೊಳ್ಳಬಹುದು. ಅದೇ ರೀತಿ ಸ್ವಾತಂತ್ರ್ಯ ನಂತರ ವಿನೋಬಾ ಮತ್ತು ಜಯಪ್ರಕಾಶ ನಾರಾಯಣರ ಕರೆಗೂ ಅವರು ಸ್ಪಂದಿಸಿದರು. ಹಾಗೆಯೇ ಈಗ ಮಾನವ ಗೌರವವನ್ನೂ, ವ್ಯಕ್ತಿಗತ ಸ್ವಾತಂತ್ರ್ಯವನ್ನೂ, ಧರ್ಮನಿರಪೇಕ್ಷತೆಯನ್ನೂ ಮತ್ತು ರಾಷ್ಟ್ರ ಗೌರವವನ್ನೂ ಕಾಪಾಡಲು ಯುವಕರು ಮುಂದೆ ಬರಬೇಕಾದ ಕಾಲ ಇದೀಗ ಬಂದಿದೆ. ★

ಸನ್ಮಾನ್ಯರಿಂದ............

ಜುಲೈ ತಿಂಗಳ ವೈಚಾರಿಕ ತಿಂಗಳ ಡೈಜೆಸ್ಟ್‌ನಲ್ಲಿ ಮೂಡಿಬಂದ ಲೇಖನ "ರಾಷ್ಟ್ರ ನಿರ್ಮಾಣದಲ್ಲಿ ಯುವಕರ ಪಾತ್ರ" ತುಂಬ ರಚನಾತ್ಮಕವಾಗಿದೆ. ಹಾಗೆಯೇ ಏಪ್ರಿಲ್ ೨೦೦೧ ರಲ್ಲಿ ಪ್ರಕಟವಾಗಿರುವ "ಅಣ್ಣೀಗೇರಿಯ ಅಣ್ಣಾ ಹಜಾರೆ"ಯವರ ವಿಚಾರ ತಿಳಿದು ಮನಸ್ಸಿಗೆ ತುಂಬ ನೋವುಂಟಾಯಿತು. ಇದೇ ರೀತಿ ಕೃಷಿ ಕ್ಷೇತ್ರದಲ್ಲಿಯ ಬೆಳವಣಿಗೆಗಳ ಬಗ್ಗೆ ತಿಂಗಳಲ್ಲಿ ಒಂದು ಲೇಖನ ಇದ್ದರೆ ತುಂಬ ಅನುಕೂಲವಾಗಬಹುದು.

ಹೆಡದಾಳು **ಹೆಚ್. ಕೆ. ಧರ್ಮೇಶ**

ನರ್ಮದಾ ಉಳಿಸಿ ಹೋರಾಟದ ಪ್ರಥಮ ಸತ್ಯಾಗ್ರಹಿ ಬಾಬಾ ಆಮ್ಟೆ

– ಸು.ಕೌ.

ಕಳೆದ ತಿಂಗಳು ಜುಲೈ ೯ ರಂದು "ನರ್ಮದಾ ಉಳಿಸಿ ಆಂದೋಲನ"ದ ಇನ್ನೊಂದು ಮಜಲು ಪ್ರಾರಂಭವಾಗಿದೆ. ಈ ಹೋರಾಟದ ನೇತಾರ ಬಾಬಾ ಆಮ್ಟೆ. ಇವರ ನೇತೃತ್ವದಲ್ಲಿ ನೂರಾರು ಜನ ಕಾರ್ಯಕರ್ತರು ನರ್ಮದಾ ನದಿಯಲ್ಲಿ **"ಜಲಸಮಾಧಿ"** ಕೈಗೊಳ್ಳಲು ಸಿದ್ಧರಾಗಿದ್ದಾರೆ. ಈ ಹೋರಾಟದ ಸ್ಥಳ ಮಧ್ಯಪ್ರದೇಶದ ಬದ್ವಾನಿ ಜಿಲ್ಲೆಯ ಛೋಟಿ ಕಸ್ರಾವಾಡ ಎಂಬ ಗ್ರಾಮ. ಇಲ್ಲಿ ನರ್ಮದಾ ನದಿಯ ಪಕ್ಕದಲ್ಲಿ ಬಾಬಾ ಆಮ್ಟೆ ಒಂದು ಗುಡಿಸಿಲು ಕಟ್ಟಿಕೊಂಡು ಕಳೆದ ಕೆಲವಾರು ವರ್ಷಗಳಿಂದ ವಾಸವಾಗಿದ್ದಾರೆ. ಅವರ ಗುಡಿಸಿಲಿನ ಹೆಸರು **"ನಿಜಬಲ"**. ಈ ಗುಡಿಸಲಿನಿಂದ ಕೇವಲ ೧೫ ಅಡಿ ದೂರದಲ್ಲಿ ನರ್ಮದಾ ನದಿ ರಭಸವಾಗಿ ಹರಿಯುತ್ತಿದೆ. ಮಳೆಯೇನಾದರೂ ಸುರಿದರೆ ನೀರಿನ ಪಾತಳಿ ಏರಿ ಈ ಗುಡಿಸಲು ಮುಳುಗುವುದರಲ್ಲಿ ಸಂದೇಹವಿಲ್ಲ. ೧೯೯೪ ರಲ್ಲಿ ಅಣೆಕಟ್ಟಿನ ಎತ್ತರ ೬೯ ಮೀಟರ್ ಇದ್ದಾಗ ಪ್ರವಾಹ ಆಮ್ಟೆಯವರ ಗುಡಿಸಲ ವರೆಗೇ ಬಂದಿತ್ತು. ಈಗ ಅಣೆಕಟ್ಟೆಯ ಎತ್ತರ ೯೦ ಮೀಟರ್‌ನಷ್ಟು ಇದೆ. ಈ ಹೋರಾಟದ ಇನ್ನೋರ್ವ ಮುಖಂಡರಾದ ಮೇಧಾ ಪಾಟ್ಕರ್ ಅವರ ಪ್ರಕಾರ ಈ ವರ್ಷದ ಮಳೆಗಾಲದಿಂದ ೪೦೦೦ ಕ್ಕೂ ಹೆಚ್ಚು ಜನರಿಗೆ ಗಂಡಾಂತರ ಉಂಟಾಗುವ ಭಯ ಇದೆ. ಇಂಥ ಹಿನ್ನೆಲೆಯಲ್ಲಿ "ಜಲಸಮಾಧಿ" ಕೈಗೊಳ್ಳಲಿರುವ ಪ್ರಥಮ ಸತ್ಯಾಗ್ರಹಿಯಾದ ಬಾಬಾ ಆಮ್ಟೆಯವರ ವಿಚಾರಗಳು ಈ ರೀತಿ ಇವೆ :–

ಪ್ರಶ್ನೆ : ಈ ಹೋರಾಟದಲ್ಲಿ ನಿಮ್ಮ ಪಾತ್ರವೇನು ?

ಉತ್ತರ : ನರ್ಮದಾ ನದಿಯ ಈ ದಂಡೆಯ ಮೇಲೆ ಈ ಗುಡಿಸಲಲ್ಲಿ ನಾನು ಕಳೆದ ೧೨ ವರ್ಷಗಳಿಂದ ವಾಸವಾಗಿದ್ದೇನೆ. ನನ್ನ ಗುಡಿಸಲ ಹೆಸರು "ನಿಜಬಲ" ಅಂದರೆ ಆತ್ಮಬಲ. ಇಲ್ಲಿ ನಾನು ಕುಳಿತಿದ್ದೇನೆ, ಯಾವ ಕೆಲಸವನ್ನೂ ಮಾಡುತ್ತಿಲ್ಲ. ನಾನು ನನ್ನನ್ನು ಜಲಸಮಾಧಿಗೆ ಒಳಪಡಿಸುತ್ತೇನೆ ಎಂದೇನೂ ಹೇಳುತ್ತಿಲ್ಲ. ಆದರೆ ನದಿ ನೀರಿನ ಮಟ್ಟ ಹೆಚ್ಚಾದರೂ ನಾನು ಈ ಸ್ಥಳವನ್ನು ಮಾತ್ರ ಬಿಟ್ಟು ಕದಲುವುದಿಲ್ಲ. ನನ್ನೊಂದಿಗೆ ಕುಳಿತಿರುವ ನರ್ಮದಾ ಕಣಿವೆಯ ಜನರು ನನ್ನನ್ನು ಪೋಲೀಸರು ಬಲವಂತವಾಗಿ ಎತ್ತಿಕೊಂಡು ಹೋಗುವುದಕ್ಕೆ ಅವಕಾಶ ಕೊಡುವುದಿಲ್ಲ.

ಪ್ರಶ್ನೆ :- ಕಳೆದ ೧೫ ವರ್ಷಗಳಿಂದ ನರ್ಮದಾ ಉಳಿಸಿ ಆಂದೋಲನ ನಡೆಯುತ್ತಿದೆ. ಅದರಿಂದ, ನಿಮ್ಮ ಅಭಿಪ್ರಾಯದಲ್ಲಿ, ಏನು ಸಾಧನೆಯಾಗಿದೆ?

ಉತ್ತರ : ಇಂಥ ಹೋರಾಟಗಳು ಬೇಗನೆ ಮುಕ್ತಾಯವಾಗುವುದಿಲ್ಲ. ಗಾಂಧೀಜಿ ಬ್ರಿಟಿಷರ ವಿರುದ್ಧ ಎಷ್ಟು ದೀರ್ಘಕಾಲ ಹೋರಾಡಿದರು? ಕೊನೆಯಲ್ಲಿ ಅವರು "ಮಾಡು ಇಲ್ಲವೆ ಮಡಿ" ಎಂಬ ಕರೆಕೊಟ್ಟರು. ನಮ್ಮೀ ಹೋರಾಟವು ಸಹ ಈಗ ಅದೇ ಘಟ್ಟವನ್ನು ತಲುಪಿದೆ. ಈ ಸರ್ದಾರ ಸರೋವರ ಒಂದು ಪ್ರದರ್ಶನ ವಸ್ತುವಾಗಿ ಉಳಿಯುತ್ತದೆ ಇಲ್ಲವೆ ನಾವು ನಾಶವಾಗುತ್ತೇವೆ. ನರ್ಮದೆಯನ್ನು ಈ ಪ್ರದೇಶದ ಜೀವನದಿಯೆಂದು ಕರೆಯುತ್ತಾರೆ. ಇನ್ನು ಮೇಲೆ ಅದು ಪ್ರಾಣಹಾರಿಣಿಯಾಗಲಿದೆ.

ಪ್ರಶ್ನೆ :- ದೇಶದ ಉನ್ನತ ನ್ಯಾಯಾಂಗವು ಈ ಯೋಜನೆಗೆ ತನ್ನ ಅನುಮತಿ ಕೊಟ್ಟಿರುವಾಗ ಈ ಹೋರಾಟವನ್ನು ಜಾರಿಯಲ್ಲಿಡುವುದನ್ನು ನೀವು ಹೇಗೆ ಸಮರ್ಥಿಸಿಕೊಳ್ಳುತ್ತೀರಿ?

ಉತ್ತರ : ನ್ಯಾಯಾಂಗವು ಸಹ ಮಾನವರಿಂದಲೇ ರಚಿತವಾಗಿದೆ. ಅದು ಕೂಡ ತಪ್ಪು ಮಾಡದೇ ಇರಲು ಸಾಧ್ಯವಿಲ್ಲ. ನ್ಯಾಯಾಂಗವು ಮಾನವ ಹಕ್ಕುಗಳ ರಕ್ಷಕ ಎಂಬ ಅಭಿಪ್ರಾಯವು ವಿಶ್ವದ ಎಲ್ಲೆಡೆಯಲ್ಲಿ ಸುಳ್ಳಾಗುತ್ತಿದೆ. ಉನ್ನತ ನ್ಯಾಯಾಲಯ ತನ್ನ ಅಧಿಕಾರವನ್ನು ಪ್ರಧಾನ ಮಂತ್ರಿಯವರಿಗೆ ಕೊಟ್ಟಿದೆ. ಅದರ ಪ್ರಕಾರ ಪ್ರಧಾನ ಮಂತ್ರಿಯವರು ಆಣೆಕಟ್ಟಿನ ಎತ್ತರವನ್ನು ಹೆಚ್ಚಿಸುವ ಬಗ್ಗೆ ತಮ್ಮ ಅನುಮತಿ ಕೊಡಲಿದ್ದಾರೆ. ಇನ್ನು ಈ ಜನರೋ ನ್ಯಾಯಾಲಯ ನಿಂದನೆಗೆ ಗುರಿಯಾಗುತ್ತಿದ್ದಾರೆ. ನ್ಯಾಯಾಂಗದ ತೀರ್ಪಿನ ವಿರುದ್ಧ ಒಂದು ನೂರು ಗ್ರಾಮ ಪಂಚಾಯಿತಿಗಳಿಗಿಂತಲೂ ಹೆಚ್ಚು ಪಂಚಾಯಿತಿಗಳು ಠರಾವುಗಳನ್ನು ಕೈಗೊಂಡಿವೆ. ಈ ಠರಾವುಗಳನ್ನು ಉನ್ನತ ನ್ಯಾಯಾಂಗಕ್ಕೆ ಕಳುಹಿಸಲಾಗಿದೆ. ಸೋಲು ಉಂಟಾಗಿದ್ದರೂ ಶರಣಾಗತನಾಗದವನೇ ನಿಜವಾದ ವಿಜಯಿ.

ಪ್ರಶ್ನೆ :- ಈ ವಿಷಯದಲ್ಲಿ ಕೋರ್ಟಿಗೆ ಹೋಗದೇ ಇದ್ದಿದ್ದರೆ ಒಳ್ಳೆಯದಾಗುತ್ತಿತ್ತಲ್ಲವೆ?

ಉತ್ತರ : ಇತಿಹಾಸದಲ್ಲಿ "ರೆ"ಗೆ ಸ್ಥಾನವಿಲ್ಲ. ಆದದ್ದು ಆಗಿ ಹೋಗಿದೆ.

ಪ್ರಶ್ನೆ :- ನರ್ಮದಾ ಯೋಜನೆಯನ್ನು ಮುಂದುವರಿಸುವುದಾಗಿ ಸರ್ಕಾರ ಹೇಳಿದೆ. ನ್ಯಾಯಾಂಗ ಒಪ್ಪಿದೆ. ಅಂದಮೇಲೆ

ನಿಮ್ಮ ಆಶೆಗೆ ಆಧಾರ ಯಾವುದು?

ಉತ್ತರ : ನನಗೆ ಯಾರಿಂದಲೂ ಆಶೆ ಇಲ್ಲ. ಆದರೆ ನಮ್ಮ ರಾಷ್ಟ್ರಪತಿಯವರು ನರ್ಮದಾ ಕಣಿವೆಗೆ ಭೇಟಿ ಕೊಡಬೇಕೆಂದು ಕಳಕಳಿಯಿಂದ ಪ್ರಾರ್ಥಿಸು ತ್ತೇನೆ. ಇದಕ್ಕಾಗಿ ರಾಷ್ಟ್ರಪತಿಯವರಿಗೆ ಯಾರಿಂದಲೂ ಅನುಮತಿ ಬೇಕಿಲ್ಲ, ನಾವು ಅವರ ಪ್ರವಾಸ ಕಾಲದಲ್ಲಿ ದೂರ ಉಳಿಯುತ್ತೇವೆ. ನಾವು ಅವರನ್ನು ಭೇಟಿಯಾಗುವುದಿಲ್ಲ. ನಾವು ಅವರಿಗೆ ಯಾವುದೇ ಅಹವಾಲು, ಮನವಿ ಇತ್ಯಾದಿ ಕೊಡುವುದಿಲ್ಲ. ಅವರೇ ಕೆಳ ಹಂತದ ವಸ್ತುಸ್ಥಿತಿಯನ್ನು ತಿಳಿದು ಕೊಳ್ಳಲಿ. ಕಳೆದ ಆಗಸ್ಟ್ ೧೪ ರಂದು ನನಗೆ ಅಂಬೇಡ್ಕರ್ ಪ್ರಶಸ್ತಿ ಕೊಡು ವಾಗ ರಾಷ್ಟ್ರಪತಿ ಮಾಡಿದ ಭಾಷಣವನ್ನು ಓದಿ ನೋಡಿರಿ. ಅವರು ಪರೋಕ್ಷ ವಾಗಿ ಉನ್ನತ ನ್ಯಾಯಾಲಯದ ತೀರ್ಮಾನವನ್ನು ತಪ್ಪೆಂದು ಆಪಾದಿಸಿದ್ದಾರೆ.

ಪ್ರಶ್ನೆ :- ಹಾಗಾದರೆ ನಿಮ್ಮ ನಿಲುವು ಅಚಲವೆನ್ನಿ?

"ನೀರಲ್ಲಿ ಮುಳುಗಿ ಹೋಗಲು ಸಿದ್ಧ, ಸೋಲು ಮಾತ್ರ ಇಲ್ಲ" – ಇದು ನಮ್ಮ ದೃಢ ನಿಲುವು ಅನ್ಯಾಯದಿಂದ ಕೂಡಿದ ಸಮಾಜದಲ್ಲಿ ನ್ಯಾಯಯುತ ವ್ಯಕ್ತಿಯ ಸ್ಥಾನ ಕಾರಾಗೃಹ ಇಲ್ಲವೆ ಮರಣ. ನನಗೆ ಆಗಲೇ ೮೭ ವರ್ಷ, ಕ್ಷತಕ ಹೃದಯ ಹಾಕಿಸಿಕೊಂಡಿದ್ದೇನೆ. ಮುಂದಿನ ದಿನಗಳನ್ನು ನೋಡಲು ನಾನು ಇರುವುದಿಲ್ಲ. ಆದರೆ ನಮ್ಮ ದೇಶದ ಜನ ಅನ್ಯಾಯದಿಂದ ಕೂಡಿದ ಸರ ಕಾರಗಳನ್ನು ವಿಸರ್ಜಿಸುತ್ತಾರೆಂದು ನಾನು ನಂಬಿದ್ದೇವೆ. ಮುಂದಿನ ದಿನಗಳಲ್ಲಿ ತೀವ್ರಗತಿಯ ರಾಜಕೀಯ ಬೆಳವಣಿಗೆಗಳಾಗಲಿವೆ. ಪುರೋಗಾಮಿ ಜನಸಂಘಟನೆ ಗಳು ಮೂರನೇ ಶಕ್ತಿಯಾಗಿ ಹೊರಹೊಮ್ಮಲಿವೆ. ಹಿಂಸಾಚಾರ ನಡೆಯದಿರ ಲೆಂಬುದೇ ನನ್ನ ಆಶೆಯಾಗಿದೆ. (ಸಂಗ್ರಹ : ಸು.ಕೌ.)

ವಾಚಕ ಮಿತ್ರರಲ್ಲಿ ವಿನಂತಿ.

"ಜನಪದ ವಿಚಾರ"ದ ಈ ಸಂಚಿಕೆಯನ್ನು ನಿಮ್ಮ ಬಳಿಗೆ ತಲುಪಿ ಸುವ ಸ್ವಾತಂತ್ರ್ಯವನ್ನು ಪಡೆದುಕೊಂಡಿದ್ದೇವೆ! ಅನೇಕ ವರ್ಷಗಳ ನಂತರ ಪುನಃ ಪತ್ರಿಕೆ ದಿನದ ಬೆಳಕನ್ನು ಕಂಡಿದೆ – ಹೊಸ ಶತಮಾನದ, ಹೊಸ ಸಹಸ್ರಮಾನದ ಸಂಕ್ರಾಂತಿ ಕಾಲದ ಪ್ರೇರಣೆಯೊಂದಿಗೆ. ದಯಮಾಡಿ ವಾರ್ಷಿಕ ಚಂದಾ ೧೦೦/– ರೂ. ಗಳನ್ನಾಗಲೀ ಇಲ್ಲವೇ ಈ ಪತ್ರಿಕೆಯ ಮುಖಬೆಲೆ ೧೦/– ರೂ. ಗಳನ್ನಾಗಲೀ ನಿಮ್ಮ ಇಚ್ಛೆಗನುಸಾರವಾಗಿ ಕಳುಹಿಸಿ ಈ ಪತ್ರಿಕೆಯ ಬೆಳವಣಿಗೆಗೆ ಪ್ರೋತ್ಸಾಹಿಸಬೇಕಾಗಿ ವಿನಮ್ರ ಕೋರಿಕೆ.

–ಪ್ರಕಾಶಕರು

ಜನಪದ ಸಂಗತಿ.................

ಐವತ್ತನಾಲ್ಕನೇ ಸ್ವಾತಂತ್ರ್ಯೋತ್ಸವ ನಮ್ಮ ಮುಂದೆ ಬಂದು ನಿಂತಿದೆ. ಆದರೆ ? ಆ ಬಗ್ಗೆ ಗಹನವಾದ ಚಿಂತೆಯಾರಿಗಿದೆ? ಎಲ್ಲ ಹಬ್ಬ ಉತ್ಸವಗಳಂತೆ ಅದೂ ಬಂದಿದೆ, ಅಷ್ಟೆ, ಎಂಬ ಭಾವನೆ ಸರ್ವತ್ರ ವ್ಯಾಪಿಸಿರುವಂತೆ ಇದೆ. ಆದರೆ ೫೪ ವರ್ಷಗಳ ಹಿಂದೆ ೧೯೪೭ ಆಗಸ್ಟ್ ೧೪ ರ ಮಧ್ಯರಾತ್ರಿ ನಮ್ಮ ದೇಶ ಭವಿಷ್ಯದೊಂದಿಗೆ ಒಪ್ಪಂದ ಮಾಡಿಕೊಂಡದ್ದು ಮತ್ತು ಆ ಒಪ್ಪಂದ ಸಮೃದ್ಧ, ಬಲಿಷ್ಠ, ಹಾಗೂ ಸುಖ-ಶಾಂತಿಯಿಂದ ಕೂಡಿದ ದೇಶದ ನಿರ್ಮಾಣಕ್ಕೆ ಸಂಬಂಧಿಸಿದ್ದಾಗಿದ್ದು, ಇಡೀ ವಿಶ್ವವೆಲ್ಲ ಮಲಗಿದ್ದಾಗ ನಮ್ಮ ದೇಶ ಎಚ್ಚರಗೊಂಡು ತನ್ನ ದಾಸ್ಯವನ್ನು ಕಳಚಿ ಪುನಃ ತನ್ನ ಗತ ವೈಭವವನ್ನು ಪಡೆಯಲು ಸನ್ನದ್ಧವಾದದ್ದು ಮತ್ತು ವಿಶ್ವಕ್ಕೇ ನಾಯಕನಾಗಲು ಬಯಸಿ ಎದ್ದು ನಿಂತದ್ದು ಇಂದಿನ ಯುವಕರು ತಿಳಿದಿಲ್ಲವಾದ್ದರಿಂದ ಅವರು ದೇಶ ನಿರ್ಮಾಣದ ಸ್ವಪ್ನ ಹೊಂದಿಲ್ಲ ತಿಳಿದವರಾದ ಹಿರಿಯರಲ್ಲಿ ಯಾವುದೇ ಕ್ರಿಯಾಶಕ್ತಿ ಉಳಿದಿಲ್ಲ; ಹೀಗಾಗಿ "ಪ್ರತಿಯೊಬ್ಬರ ಕಣ್ಣಲ್ಲಿಯ ಕಣ್ಣೀರನ್ನು ಒರೆಸುವ", ಬಾಪುವಿನ ಸಂಕಲ್ಪವನ್ನು ಪೂರ್ತಿಮಾಡಲು ಯಾರೂ ಉಳಿದಿಲ್ಲ. ಭಾರತಕ್ಕೆ ಸ್ವಾತಂತ್ರ್ಯ ಸಿಗುವ ಮುನ್ನವೇ ಭಾರತ ಯಾವ ರೀತಿ ಇರಬೇಕೆಂಬ ಕಲ್ಪನೆಯನ್ನು ಮಾಡಿದ್ದ ರವೀಂದ್ರನಾಥ ಠಾಗೂರರ ಈ ಸಾಲುಗಳನ್ನು ಗಮನಿಸೋಣ ಮತ್ತು ಅಂಥ ದೇಶ ನಿರ್ಮಾಣಕ್ಕಾಗಿ ಪ್ರಯತ್ನಿಸೋಣ:-

ಎಲ್ಲಿ ಮನ ನಿರ್ಭೀತ
ಎಲ್ಲಿ ಶಿರ ನಿಮಿರಿ ನಿಂದಿಹುದೋ
ಎಲ್ಲಿ ಜ್ಞಾನ ನಿರಾತಂಕ
ಎಲ್ಲಿ ಜಗ ಸಂಕುಚಿತ ಭಿತ್ತಿಗಳ ದೆಸೆಯಿಂದ
ನುಚ್ಚುನೂರಾಗಿ ಒಡೆದಿಲ್ಲವೋ
ಎಲ್ಲಿ ನುಡಿ ಸತ್ಯದಂತರಾಳದಿಂದಲಿ ಹೊಮ್ಮುವುದೊ
ಎಲ್ಲಿ ದಣಿಯದ ಕಾರ್ಯ ಪೂರ್ಣತೆಗೆ ಕೈಚಾಚಿ ನಿಂತಿಹುದೊ
ಎಲ್ಲಿ ವಿವೇಚನೆಯು ಸ್ವಚ್ಛ ತೊರೆ, ಜಡ ಸಂಪ್ರದಾಯದ
ಮರಳು ಬೀಳಿನಲಿ ಇಂಗಿಲ್ಲವೊ
ಎಲ್ಲಿ ಮನವನು ನೀನು ಹಬ್ಬಿ ಹರಡುವ
ಚಿಂತನಾ ಕಾರ್ಯಗಳಲಿ ಕರೆದೊಯ್ಯುತಿಹೆಯೋ
ಅಲ್ಲಿ ಆ ಸ್ವಾತಂತ್ರ್ಯ ನಂದನದಿ ಈ ನನ್ನ ರಾಷ್ಟ್ರವನು
ಎಚ್ಚರಿಸು, ಹೇ ತಂದೆ ✵

-ಸು. ಕಾ.

Here to.

A-SKMND-470/-2000.

ತೆರೆದ-ಅಂಚೆ

egd No. KAR/KAN/2000/3820

ol 2 Issue 1,

Janapada Vichara – Kannada Monthly Digest Edited and Printed by Surendra Koulagi at Janapada Seva Trust Printing Press, Melkote on behalf of Janapada Seva Trust, (Regd) Melkote, Dist – Mandya 571 431.

Phone : 08236/48754